ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಸ್ವಾತಂತ್ರ್ಯ ಅಮೃತ ಮಹೋತ್ಸವ ಪುಸ್ತಕ ಮಾಲೆ

## ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ

# ಬೆಳಗಾವಿ

ಪ್ರಧಾನ ಸಂಪಾದಕರು

**ಡಾ. ಬಿ.ವಿ. ವಸಂತಕುಮಾರ್**

ಸಂಪಾದಕರು

**ಡಾ. ಮೃತ್ಯುಂಜಯ ರುಮಾಲೆ**

ಲೇಖಕರು

**ಪ್ರಕಾಶ ಗಿರಿಮಲ್ಲನವರ**

**ಕರ್ನಾಟಕ ಸಾಹಿತ್ಯ ಅಕಾಡೆಮಿ**
ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು–೫೬೦ ೦೦೨
ದೂರವಾಣಿ: ೦೮೦–೨೨೨೧೧೭೩೦ / ೨೨೧೦೬೪೬೦
www.karnatakasahithyaacademy.org
ಇ–ಮೇಲ್: sahithya.academy@gmail.com

**BELAGAVI:** An Introduction Book on Places in Karnataka that Played a Major Role in the Freedom Struggle, Written by Prakash Girimallanavara, Published by Kariyappa N., Registrar, Karnataka Sahithya Academy, Kannada Bhavana, J.C. Road, Bengaluru-560002

ಹಕ್ಕು: ಕರ್ನಾಟಕ ಸಾಹಿತ್ಯ ಅಕಾಡೆಮಿ

**ಪ್ರಧಾನ ಸಂಪಾದಕರು**
ಡಾ. ಬಿ.ವಿ. ವಸಂತಕುಮಾರ್
ಅಧ್ಯಕ್ಷರು, ಕರ್ನಾಟಕ ಸಾಹಿತ್ಯ ಅಕಾಡೆಮಿ

**ಸಂಪಾದಕ ಮಂಡಳಿ**
ಡಾ. ಎಸ್. ಜಿ. ರಾಮದಾಸ ರೆಡ್ಡಿ
ಡಾ. ಮೃತ್ಯುಂಜಯ ರುಮಾಲೆ
ಶ್ರೀ ನರೇಂದ್ರಕುಮಾರ್ ಎಸ್.ಎಸ್.
ಡಾ. ಪ್ರಕಾಶ ಗ. ಖಾಡೆ
ಶ್ರೀಮತಿ ಕೋಡಿಬೆಟ್ಟು ರಾಜಲಕ್ಷ್ಮಿ

**ಲೇಖಕರು**
ಪ್ರಕಾಶ ಗಿರಿಮಲ್ಲನವರ

ಮೊದಲ ಮುದ್ರಣ: ೨೦೨೨
ಪ್ರತಿಗಳು: ೧೦೦೦
ಬೆಲೆ: ರೂ. ೩೦/-
ಪುಟ: ೫೬


ಮುಖಪುಟ ಚಿತ್ರ: ಮುರಳೀಧರ ವಿ. ರಾಥೋಡ್

ಪ್ರಕಾಶಕರು:
ಕರಿಯಪ್ಪ ಎನ್., ರಿಜಿಸ್ಟ್ರಾರ್
ಕರ್ನಾಟಕ ಸಾಹಿತ್ಯ ಅಕಾಡೆಮಿ

ಮುದ್ರಕರು
**ರಶ್ಮಿ ಪ್ರಿಂಟರ್ಸ್**
ಸುಧಾಮನಗರ, ಬೆಂಗಳೂರು
ಮೊ: ೯೯೦೧೯೧೬೫೮೧

**ಬಸವರಾಜ ಬೊಮ್ಮಾಯಿ**
ಮುಖ್ಯಮಂತ್ರಿ

ವಿಧಾನಸೌಧ
ಬೆಂಗಳೂರು-560 001



## ಶುಭ ಸಂದೇಶ

ಭಾರತ ಸ್ವಾತಂತ್ರ್ಯದ ಅಮೃತ ಮಹೋತ್ಸವ ಸಂದರ್ಭದಲ್ಲಿ ದೇಶದಾದ್ಯಂತ ದೇಶಪ್ರೇಮವನ್ನು ಬೆಳೆಸುವ ಸಾವಿರಾರು ಕಾರ್ಯಕ್ರಮಗಳು ನಡೆಯುತ್ತಿರುವ ಹೊತ್ತಿನಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಕರ್ನಾಟಕದ ೩೧ ಜಿಲ್ಲೆಗಳಲ್ಲಿ ಭಾರತ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿರುವ ೭೫ ಸ್ಥಳಗಳನ್ನು ಗುರುತಿಸಿ, ೭೫ ಪುಸ್ತಕಗಳನ್ನು ಹೊರತರುತ್ತಿರುವುದು ಸಂತೋಷದ ವಿಚಾರ.

ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಕರ್ನಾಟಕದ ಕೊಡುಗೆ ಬಹಳ ಮಹತ್ವದ್ದು. ಕರ್ನಾಟಕದ ಹಲವು ಮಹನೀಯರು ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕಾಗಿ ನಡೆಸಿದ ತ್ಯಾಗ ಬಲಿದಾನಗಳು ಅಪಾರ. ಅಂತೆಯೇ ಕರ್ನಾಟಕದ ಸಾವಿರಾರು ಸ್ಥಳಗಳು ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿ ನಿಂತಿವೆ. ವಿದುರಾಶ್ವತ್ಥ, ಈಸೂರು, ಶಿವಪುರಗಳನ್ನೂ ಒಳಗೊಂಡಂತೆ ಕರ್ನಾಟಕದ ೩೧ ಜಿಲ್ಲೆಗಳ ಸಾವಿರಾರು ಸ್ಥಳಗಳಲ್ಲಿ ಭಾರತದ ಸ್ವಾತಂತ್ರ್ಯ ಸಂಗ್ರಾಮವು ನಡೆದುದಕ್ಕೆ ಸಾಕ್ಷಿಯಾಗಿ ಹಲವಾರು ಕುರುಹುಗಳು, ಅವಶೇಷಗಳು, ಸ್ಮಾರಕಗಳು ಇತಿಹಾಸದ ಪುಟಗಳಲ್ಲಿ ದಾಖಲಾಗಿವೆ. ಆದಾಗ್ಯೂ ಇನ್ನೂ ದಾಖಲಾಗಬೇಕಾದ ಸಂಗತಿಗಳು ಉಳಿದಿವೆ. ಭಾರತ ಸ್ವಾತಂತ್ರ್ಯದ ಅಮೃತೋತ್ಸವದ ಸಂದರ್ಭದಲ್ಲಿ ಈ ಎಲ್ಲ ಅಂಶಗಳನ್ನು ದಾಖಲಿಸುವ ಕೆಲಸ ತುರ್ತಾಗಿ ಆಗಬೇಕಾಗಿದೆ.

ಭಾರತ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿರುವ ಕರ್ನಾಟಕದ ವಿವಿಧ ಸ್ಥಳದಲ್ಲಿ ನಡೆದ ಘಟನೆಗಳು, ತ್ಯಾಗ, ಬಲಿದಾನಗಳು, ಹೋರಾಟಗಳು ಇತ್ಯಾದಿ

ವಿವರಗಳೆಲ್ಲವನ್ನೂ ಪುಸ್ತಕ ರೂಪದಲ್ಲಿ ದಾಖಲಿಸುವ ಮೂಲಕ, ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರ್ನಾಟಕದ ಕೊಡುಗೆಯ ಮೇಲೆ ಬೆಳಕು ಚೆಲ್ಲುವ ಪ್ರಯತ್ನವನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿ ಮಾಡಿದೆ. ಇದು ನಿಜಕ್ಕೂ ಒಂದು ಸಂಶೋಧನಾತ್ಮಕ ಪ್ರಯತ್ನವೇ ಸರಿ.

ಈ ಸಾರ್ಥಕ ಕಾರ್ಯವನ್ನು ಯಶಸ್ವಿಗೊಳಿಸಿದ ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷರು ಹಾಗೂ ಬಳಗದವರನ್ನು ನಾನು ಮನಃಪೂರ್ವಕವಾಗಿ ಅಭಿನಂದಿಸುತ್ತೇನೆ.

ಎಲ್ಲರಿಗೂ ಭಾರತ ಸ್ವಾತಂತ್ರ್ಯ ಅಮೃತ ಮಹೋತ್ಸವದ ಶುಭಾಶಯಗಳು.

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ
ಕರ್ನಾಟಕ ಸರ್ಕಾರ

**ವಿ ಸುನಿಲ್ ಕುಮಾರ್**

ಸ್ವಾತಂತ್ರ್ಯದ ಅಮೃತಮಹೋತ್ಸವ

ಇಂಧನ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು



# ಶುಭ ಸಂದೇಶ

**‘ಜಯ ಭಾರತ ಜನನಿಯ ತನುಜಾತೆ, ಜಯ ಹೇ ಕರ್ನಾಟಕ ಮಾತೆ’**

ಜಗತ್ತಿನಲ್ಲಿ ಭಾರತ ಒಂದು ವಿಶಿಷ್ಟವಾದ ಮಹತ್ವದ ರಾಷ್ಟ್ರ. ವಿಶ್ವಕ್ಕೆ ವಿಶ್ವಮಾನವನನ್ನು, ವಿಶ್ವಕುಟುಂಬವನ್ನು, ವಿಶ್ವನಾಥನನ್ನು, ಜಗನ್ಮಾತೆಯನ್ನು ನೀಡಿರುವ ಆಧ್ಯಾತ್ಮದ ಪುಣ್ಯಭೂಮಿ. ವೇದ, ಉಪನಿಷತ್ತುಗಳ ಕಾಲದಿಂದ ಹಿಡಿದು, ರಾಮ, ಕೃಷ್ಣ, ಶಿವ, ಬುದ್ಧ, ಬಸವ, ಗಾಂಧಿ, ಅಂಬೇಡ್ಕರ್, ಮೈತ್ರೇಯಿ, ಗಾರ್ಗಿ, ಅರುಂಧತಿ, ಸೀತೆ, ಮಂಡೋದರಿ, ಮೀರಾ, ಅಕ್ಕಮಹಾದೇವಿ ಮೊದಲಾದ ಪೌರಾಣಿಕ, ಐತಿಹಾಸಿಕ ವ್ಯಕ್ತಿತ್ವಗಳ ಅಂತಃಶಕ್ತಿಯಿಂದ ಜಗತ್ತನ್ನು ಬೆಳಗಿದ ದೇಶ ಭಾರತ. ಇಂಥ ದೇಶದ ಮೇಲೆ ಅಲೆಗ್ಸಾಂಡರನಿಂದ ಹಿಡಿದು ಮೊಘಲರಾದಿಯಾಗಿ ಬ್ರಿಟಿಷರವರೆಗೆ ಆಕ್ರಮಣ ಮಾಡಲು ಪ್ರಯತ್ನಿಸಿ, ಸೋತು ಭಾರತೀಯ ಸಂಸ್ಕೃತಿಯ ಅಗಾಧತೆಗೆ ಶರಣಾಗಿ ಭಾರತೀಯರೇ ಆಗಿಹೋಗಿದ್ದಾರೆ. ಹಾಗೇ ಭಾರತವನ್ನು ಭಾರತವನ್ನಾಗಿ ಉಳಿಸಿರುವ ಮಹಾನ್ ಶಕ್ತಿಯೇ ಸ್ವಾತಂತ್ರ್ಯದ ತೀವ್ರ ತುಡಿತ.

ಭಾರತದ ಸ್ವಾತಂತ್ರ್ಯ ಸಂಗ್ರಾಮ ಸುಮಾರು ಮುನ್ನೂರು ವರ್ಷಗಳಿಗೂ ಹಳೆಯದು. ಇಡೀ ಭಾರತವೇ ಬ್ರಿಟಿಷರ ವಿರುದ್ಧ ಹೋರಾಡಿ ದಾಸ್ಯದಿಂದ ಮುಕ್ತವಾಗಿ ಸ್ವಾತಂತ್ರ್ಯವನ್ನು ಪಡೆದುಕೊಂಡು ಈಗ ೭೫ ವರ್ಷಗಳಾಗಿವೆ. ಈ ಸ್ವಾತಂತ್ರ್ಯದ ಅಮೃತ ಮಹೋತ್ಸವ ಸಂದರ್ಭವನ್ನು ಅರ್ಥಪೂರ್ಣವಾಗಿ ಆಚರಿಸಬೇಕಾದ್ದು ನಮ್ಮೆಲ್ಲರ ಕರ್ತವ್ಯ.

ಇಡೀ ದೇಶವನ್ನೇ ಜಾಗೃತಗೊಳಿಸಿದ ಭಾರತದ ಸ್ವಾತಂತ್ರ್ಯ ಸಂಗ್ರಾಮ,

ನಮ್ಮ ಕರ್ನಾಟಕದಲ್ಲಿಯೂ ಸಹ ಸ್ವಾತಂತ್ರ್ಯ ಸಂಗ್ರಾಮದ ಪಾಂಚಜನ್ಯವನ್ನು ಮೊಳಗಿಸಿತು. ಕರ್ನಾಟಕದ ಕಲಿಗಳು ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಿ, ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ವಿಶಿಷ್ಟ ಕೊಡುಗೆ ನೀಡಿರುವುದನ್ನು ಸ್ಮರಿಸಬೇಕಿದೆ. ಕರ್ನಾಟಕದಲ್ಲಿ ಸಾವಿರಾರು ಸ್ವಾತಂತ್ರ್ಯ ಹೋರಾಟದ ಘಟನೆಗಳನ್ನು ಸಾರುವ ಐತಿಹಾಸಿಕ ಸ್ಥಳಗಳಿವೆ. ಅಂಥ ಸ್ಥಳಗಳು ಅರಿವಿಗೆ ಬಾರದೆ ಮರೆಯಾಗಿ ಹೋಗುತ್ತಿವೆ. ಸ್ವಾತಂತ್ರ್ಯದ ಹಣತೆ ಹೊತ್ತಿಸಿದ ಪ್ರಮುಖ ಸ್ಥಳಗಳಲ್ಲಿ ತ್ಯಾಗ, ಬಲಿದಾನಗಳನ್ನು ನೆನಪಿಸುವ ನಿಟ್ಟಿನಲ್ಲಿ ಮತ್ತು ಇಂದಿನ ಪೀಳಿಗೆಗೆ ತಿಳಿಸಿಕೊಡುವ ಕೆಲಸ ಈ ಅಮೃತ ಮಹೋತ್ಸವದ ಸಂದರ್ಭದಲ್ಲಿ ಆಗುತ್ತಿರುವುದು ಸಂತಸದ ವಿಷಯ. ಈ ನಿಟ್ಟಿನಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಒಂದು ಬೃಹತ್ ಆಂದೋಲನವನ್ನು ಹಮ್ಮಿಕೊಂಡಿದೆ. ಅದರ ಅಂಗವಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರ್ನಾಟಕದ ಐತಿಹಾಸಿಕ ಮಹತ್ವಗಳನ್ನು ತಿಳಿಸಿಕೊಡುವ ೭೫ ಸ್ಥಳಗಳ ಬಗ್ಗೆ ೭೫ ವಿವಿಧ ಲೇಖಕರಿಂದ ಒಟ್ಟು ೭೫ ಪುಸ್ತಕಗಳನ್ನು, ಅದರ ತಲಾ ೧೦೦೦ ಪ್ರತಿಯಂತೆ ೭೫೦೦೦ ಪ್ರತಿಗಳನ್ನು ಎರಡು ತಿಂಗಳಲ್ಲಿ ಬರೆಯಿಸಿ, ಮುದ್ರಿಸಿ ಓದುಗರಿಗೆ ತಲುಪಿಸುತ್ತಿರುವುದು ನಿಜಕ್ಕೂ ಹೆಮ್ಮೆಯ ವಿಷಯ. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪ್ರತಿಯೊಬ್ಬರನ್ನೂ ಈ ಸಂದರ್ಭದಲ್ಲಿ ಅಭಿನಂದಿಸುತ್ತೇನೆ.

ನಾವೆಲ್ಲರೂ ಕೂಡಿ ನಮ್ಮ ನಮ್ಮ ಮನೆಮನಗಳಿಂದ ನಾಡು, ನುಡಿ, ಸಾಹಿತ್ಯ, ಸಂಸ್ಕೃತಿ, ಪರಂಪರೆಗಳನ್ನು ಬೆಳೆಸೋಣ. ರಸಋಷಿ ಕುವೆಂಪು ಅವರು ಹೇಳಿರುವ 'ಜಯ ಭಾರತ ಜನನಿಯ ತನುಜಾತೆ, ಜಯ ಹೇ ಕರ್ನಾಟಕ ಮಾತೆ' ಎಂಬ ಆದರ್ಶದೊಂದಿಗೆ ಕರ್ನಾಟಕದ ಮೂಲಕ ಭಾರತವನ್ನೂ, ಭಾರತದ ಮೂಲಕ ಕರ್ನಾಟಕವನ್ನೂ ಅಭಿನ್ನಗೊಳಿಸೋಣ, ಬಲಿಷ್ಠಗೊಳಿಸೋಣ. ಭವ್ಯ ಕರ್ನಾಟಕ, ಭವ್ಯ ಭಾರತ ನಿರ್ಮಿಸೋಣ.

**(ವಿ ಸುನಿಲ್ ಕುಮಾರ್)**
ಇಂಧನ, ಕನ್ನಡ ಮತ್ತು ಸಂಸ್ಕೃತಿ
ಇಲಾಖೆ ಸಚಿವರು

# ಪ್ರಧಾನ ಸಂಪಾದಕರ ಮಾತು

ಸ್ವಾತಂತ್ರ್ಯ ಎಂಬುದು ಲೌಕಿಕವಾಗಿಯೂ ಲೋಕೋತ್ತರವಾಗಿಯೂ ಮಹೋನ್ನತವಾದ ಮೌಲ್ಯ. ಭಾರತೀಯ ಸಂಸ್ಕೃತಿಯು ಧರ್ಮ, ಅರ್ಥ, ಕಾಮ, ಮೋಕ್ಷಗಳನ್ನು ಪುರುಷಾರ್ಥವೆಂದು ಕರೆದಿದೆ. ಮೋಕ್ಷವೆಂದರೆ ಬಿಡುಗಡೆ, ಸ್ವಾತಂತ್ರ್ಯ ಎಂದರ್ಥ. ಹುಟ್ಟು ಸಾವುಗಳಿಂದ ಬಿಡುಗಡೆ ಎಂಬುದು ಲೋಕೋತ್ತರವಾದ ಅರ್ಥವಾದರೆ, ಸಾವಿಲ್ಲದ, ನೋವಿಲ್ಲದ ಸ್ಥಿತಿಗಾಗಿ ಕಲ್ಯಾಣ ನಾಡಿನ ನಿರ್ಮಾಣಕ್ಕಾಗಿ ನಾವು ಗಳಿಸುವ ನಮ್ಮ ಸ್ವಯಂ ನಿಯಂತ್ರಣದ ಸ್ವಾತಂತ್ರ್ಯ ಎಂಬುದು ಲೌಕಿಕವಾದ ಅರ್ಥ. ಲೌಕಿಕ ಹಾಗೂ ಅಲೌಕಿಕಗಳು ಪರಸ್ಪರ ವಿರೋಧಿಗಳಲ್ಲ; ಅವು ಪರಸ್ಪರ ಪೂರಕವಾದವು. ಲೋಕವನ್ನು ಲೋಕೋತ್ತರದ ಔನ್ನತ್ಯಕ್ಕೆ ಏರಿಸುವ ದರ್ಶನವೇ ಭಾರತೀಯ ದರ್ಶನ. ಸ್ವಾತಂತ್ರ್ಯ ನಮ್ಮ ಧರ್ಮ, ನಮ್ಮ ಆತ್ಮ, ನಮ್ಮ ಜೀವನದ ಪರಮ ಪುರುಷಾರ್ಥ. ಅದನ್ನು ಬಯಲು ಎಂದೂ ಕರೆದಿದ್ದಾರೆ. ಅಂತಹ ಸ್ವಾತಂತ್ರ್ಯಕ್ಕಾಗಿ ಭಾರತವು ತನ್ನ ಪುರಾತನ ಕಾಲದಿಂದಲೂ ಬದುಕುತ್ತಾ ಬಂದಿದೆ. ಸ್ವಾತಂತ್ರ್ಯಕ್ಕೆ ಚ್ಯುತಿ ಬಂದಾಗಲೆಲ್ಲ ಭಾರತೀಯರು ಭರತಮಾತೆಯ ಪದತಲದಲ್ಲಿ ತಮ್ಮ ತನು–ಮನ–ಧನಗಳನ್ನು ಅರ್ಪಿಸಿದ್ದಾರೆ. ಅದನ್ನು ರಸಋಷಿ ಕುವೆಂಪು ಅವರು "ಇಂದು ರಕ್ತದ ಬಿಂದು ನಾಳೆ ಸೌಖ್ಯದ ಸಿಂಧು" ಎಂದು ಕರೆದಿದ್ದಾರೆ.

ನಮ್ಮ ದೇಶದ ಸ್ವಾತಂತ್ರ್ಯ ಎಂದರೆ ಅದು ತ್ಯಾಗ, ಬಲಿದಾನಗಳ ಫಲ. ಭಾರತದ ಮೇಲೆ ದಾಳಿ ಮಾಡಲು ಬಂದ ಅಲೆಗ್ಸಾಂಡರನಿಂದ ಹಿಡಿದು ಮೊಘಲರಾದಿಯಾಗಿ ಬ್ರಿಟಿಷರವರೆಗಿನ ಎಲ್ಲ ದಾಳಿಕೋರರ ಕ್ರೌರ್ಯವನ್ನು ಮೆಟ್ಟಿ ನಿಂತು ಭಾರತೀಯರು ಭಾರತಾಂಬೆಯ ಆತ್ಮಗೌರವವನ್ನು ಎತ್ತಿಹಿಡಿದಿರುವುದರ ಪ್ರತೀಕ ನಮ್ಮ ಸ್ವಾತಂತ್ರ್ಯ.

ಪ್ರಸ್ತುತ ೧೫.೦೮.೧೯೪೭ ರಂದು ನಾವು ಗಳಿಸಿದ ಸ್ವಾತಂತ್ರ್ಯದ ಅಮೃತಘಳಿಗೆಗೆ ಇದೀಗ ೧೫.೦೮.೨೦೨೧ಕ್ಕೆ ೭೫ನೆಯ ಸ್ವಾತಂತ್ರ್ಯ ಅಮೃತ ಮಹೋತ್ಸವ ಸಂಭ್ರಮ. ೧೫.೦೮.೨೦೨೨ಕ್ಕೆ ೭೫ ವರ್ಷಗಳನ್ನು ಪೂರೈಸಿ ೭೬ನೆಯ ಸ್ವಾತಂತ್ರ್ಯೋತ್ಸವದ ಆತ್ಮನಿರ್ಭರ ಭಾರತದ ನವನಿರ್ಮಾಣದ ಅವಕಾಶಗಳ ಸಂಭ್ರಮ. ಈ ಒಂದು ವರ್ಷ ಕಾಲ ಭಾರತ ಸರ್ಕಾರ, ಕರ್ನಾಟಕ ಸರ್ಕಾರ "ಸ್ವಾತಂತ್ರ್ಯದ ಅಮೃತ ಮಹೋತ್ಸವ"ವನ್ನು ಆಚರಿಸುತ್ತಿದೆ. ಅದರ ಅಂಗವಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಆಗಸ್ಟ್– ೨೦೨೧ರ ತಿಂಗಳು ಪೂರ್ತಿ "ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ" ಎಂಬ ಹೆಸರಿನಲ್ಲಿ ಕರ್ನಾಟಕದ ಎಲ್ಲ ಜಿಲ್ಲೆಗಳಲ್ಲಿ ನಡೆದಿರುವ ಸ್ವಾತಂತ್ರ್ಯ ಹೋರಾಟ ಕುರಿತ ಆನ್ಲೈನ್ ಉಪನ್ಯಾಸಗಳನ್ನು ನಡೆಸಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಾನ್ಯ ಸಚಿವರಾದ ಶ್ರೀ ಸುನಿಲ್ ಕುಮಾರ್ ಅವರು ಸ್ವಾತಂತ್ರ್ಯದ ಅಮೃತ ಮಹೋತ್ಸವವನ್ನು ರಾಜ್ಯಾದ್ಯಂತ ಬೃಹತ್ ಸ್ವರೂಪದಲ್ಲಿ ಅರ್ಥಪೂರ್ಣವಾಗಿ ಆಚರಿಸಬೇಕೆಂದು ತೀರ್ಮಾನಿಸಿದ್ದಾರೆ. ಅವರಿಗೆ ರಾಜ್ಯದ ೭೫ ಸ್ಥಳಗಳಲ್ಲಿ ೭೫ ಸ್ವಾತಂತ್ರ್ಯ ಜಾಥಾಗಳು ನಡೆಯಬೇಕು, ಎಲ್ಲ ಜಿಲ್ಲೆಗಳಿಂದ ರಥಯಾತ್ರೆ ಆಗಬೇಕು, ಬೆಂಗಳೂರು ಮಹಾನಗರದಲ್ಲಿ ಮೂರು ದಿನಗಳ ಸಮಾವೇಶ, ಪ್ರದರ್ಶನಿ, ಪುಸ್ತಕ ಮಾರಾಟ ಮೊದಲಾದ ಹತ್ತು ಹಲವು ಚಟುವಟಿಕೆಗಳನ್ನು ನಡೆಸುವ ಮೂಲಕ ಹೊಸ ತಲೆಮಾರಿಗೆ ಸ್ವಾತಂತ್ರ್ಯದ ಅಮೃತವನ್ನುಣಿಸಬೇಕೆಂಬ ಕನಸಿದೆ. ಅದರ ಭಾಗವಾಗಿ ಅವರು ರಾಜ್ಯದ ೭೫ ಸ್ವಾತಂತ್ರ್ಯ ಹೋರಾಟದ ಸ್ಥಳಗಳನ್ನು ಗುರುತಿಸಿ ೭೫ ಕಿರುಹೊತ್ತಿಗೆಗಳನ್ನು ಬರೆಸಿ ಪ್ರಕಟಿಸುವ ಜವಾಬ್ದಾರಿಯನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿಗೆ ವಹಿಸಿದ್ದಾರೆ. ನಮಗೆ ಜವಾಬ್ದಾರಿ ವಹಿಸಿದ್ದು ದಿನಾಂಕ: ೩೦.೧೧.೨೦೨೧ರಂದು ಮಾನ್ಯ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ. ಅಂದಿನಿಂದಲೇ ಕಾರ್ಯಪ್ರವೃತ್ತರಾದ ನಾವು ರಾಜ್ಯದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಎಲ್ಲ ಜಿಲ್ಲಾ ಸಹಾಯಕ ನಿರ್ದೇಶಕರಿಂದ ಸ್ಥಳಗಳ ಮಾಹಿತಿ ಪಡೆದೆವು. ಜೊತೆಗೆ ರಾಜ್ಯದ ಐದು ಜನರನ್ನು ಸಂಪಾದಕರನ್ನಾಗಿ ನಿಯೋಜಿಸಿ ದಿನಾಂಕ: ೦೩.೧೨.೨೦೨೧ರಂದು ಅಕಾಡೆಮಿಯಲ್ಲಿ ಸಂಪಾದಕರ ಸಭೆ ನಡೆಸಿದೆವು. ಸಂಪಾದಕರಾಗಿ ಡಾ. ಮೃತ್ಯುಂಜಯ ರುಮಾಲೆ, ಹೊಸಪೇಟೆ, ಡಾ. ಎಸ್. ಜಿ. ರಾಮದಾಸ ರೆಡ್ಡಿ, ಮೈಸೂರು, ಡಾ. ಪ್ರಕಾಶ ಗ. ಖಾಡೆ, ಬಾಗಲಕೋಟೆ,



ಶ್ರೀ ನರೇಂದ್ರಕುಮಾರ್ ಎಸ್.ಎಸ್., ಬೆಂಗಳೂರು ಹಾಗೂ ಶ್ರೀಮತಿ ರಾಜಲಕ್ಷ್ಮಿ ಕೋಡಿಬೆಟ್ಟು, ಮಂಗಳೂರು ಇವರೊಂದಿಗೆ ಎಲ್ಲ ಸ್ಥಳಗಳ ಬಗ್ಗೆ ಚರ್ಚಿಸಿ ೭೫ ಸ್ಥಳಗಳನ್ನು ಆಯ್ಕೆ ಮಾಡಿದೆವು. ಒಬ್ಬೊಬ್ಬ ಸಂಪಾದಕರಿಗೆ ೧೫ ಸ್ಥಳಗಳನ್ನು ಹಂಚಿ, ೧೫ ಲೇಖಕರಿಂದ ೧೫ ಕಿರುಪುಸ್ತಕಗಳನ್ನು ಬರೆಯಿಸಿಕೊಡುವ ಜವಾಬ್ದಾರಿ ನೀಡಿದೆವು. ಎರಡು ತಿಂಗಳ ಅವಧಿಯಲ್ಲಿ ಈ ೭೫ ಪುಸ್ತಕಗಳು ಪ್ರಕಟವಾಗುತ್ತಿವೆ. ಈ ಕೃತಿಗಳು ಇತಿಹಾಸದ ಶಾಸ್ತ್ರೀಯ ಮಾದರಿ, ವರದಿಯ ಕಥನ ಮಾದರಿ ಹಾಗೂ ಸೃಜನಶೀಲ ಅಭಿವ್ಯಕ್ತಿಯ ಸಾಹಿತ್ಯ ಮಾದರಿಗಳಿಂದ ಕೂಡಿರುವುದು ಗಮನಾರ್ಹ. ಅತೀ ಕಡಿಮೆ ಅವಧಿಯಲ್ಲಿ ಕ್ಷೇತ್ರಕಾರ್ಯ ಮತ್ತು ಅಧ್ಯಯನ ಮಾಡಿ ಮೌಲಿಕವಾದ ಕೃತಿಗಳನ್ನು ಬರೆದುಕೊಟ್ಟಿರುವ ಎಲ್ಲಾ ಲೇಖಕರ, ಸಂಪಾದಕರ ಶ್ರಮ ಸಾರ್ಥಕತೆ ಪಡೆದಿದೆ. ಈ ನಿಟ್ಟಿನ ಅಧ್ಯಯನಗಳಿಗೆ ಈ ಕೃತಿಗಳು ಪ್ರೇರೇಪಿಸುತ್ತವೆ. ಇದೊಂದು ತುರ್ತಾದ ಆಂದೋಲನಾತ್ಮಕವಾದ ಪ್ರಯತ್ನ. ಇದಕ್ಕೆ ಸಂಪೂರ್ಣ ಸಹಕಾರ ನೀಡಿದ ಮಾನ್ಯ ಸಚಿವರಾದ ಶ್ರೀ ವಿ ಸುನಿಲ್ ಕುಮಾರ್ ಅವರಿಗೆ, ಎಲ್ಲಾ ಸಂಪಾದಕರಿಗೆ, ಎಲ್ಲಾ ಲೇಖಕರಿಗೆ, ಇಲಾಖೆಯ ಕಾರ್ಯದರ್ಶಿಗಳಾದ ಡಾ. ಎನ್. ಮಂಜುಳಾ ಅವರಿಗೆ, ನಿರ್ದೇಶಕರಾದ ಶ್ರೀ ಎಸ್. ರಂಗಪ್ಪ ಅವರಿಗೆ, ಜಂಟಿ ನಿರ್ದೇಶಕರಾದ ಶ್ರೀ ಅಶೋಕ್ ಎನ್. ಚಲವಾದಿ ಅವರಿಗೆ ಹಾಗೂ ಎಲ್ಲಾ ಅಧಿಕಾರಿ ವರ್ಗಕ್ಕೆ ಸಾಹಿತ್ಯ ಅಕಾಡೆಮಿಯ ಸರ್ವ ಸದಸ್ಯರಿಗೆ ಪ್ರೀತಿಯಿಂದ ವಂದಿಸುತ್ತೇನೆ. ಯೋಜನೆ ಪೂರ್ಣಗೊಳ್ಳಲು ವಿಶೇಷವಾಗಿ ನೆರವಾದ ಮಿತ್ರರಾದ ಶ್ರೀ ಮಾಲತೀಶ್ ಭಟ್, ಶ್ರೀ ಹರ್ಷ ನಾರಾಯಣ, ಶ್ರೀಮತಿ ನಯನಾ ಎಸ್. ಅವರನ್ನು ನೆನೆಯುತ್ತಾ ವಂದಿಸುತ್ತೇನೆ. ಕಡಿಮೆ ಅವಧಿಯಲ್ಲಿ ಹಗಲಿರುಳು ಶ್ರಮಿಸಿದ ದಣಿವರಿಯದ ದುಡಿಮೆಗಾರರಾದ ರಿಜಿಸ್ಟ್ರಾರ್ ಎನ್. ಕರಿಯಪ್ಪ, ನಮ್ಮ ಬಳಗ ವಿ. ಹರೀಶ್‌ಕುಮಾರ್, ಹರೀಶ್, ಸೈಯದ್ ಜಾವೀದ್, ಸುಚಿತ್ರ ಎಸ್. ಜಿ., ಗೋಪಾಲ ಎನ್., ಸುನೀಲ್ ಅವರಿಗೆ ಹಾಗೂ ಸುಂದರವಾಗಿ ಮುದ್ರಿಸಿದ ರಶ್ಮಿ ಪ್ರಿಂಟರ್ಸ್ ಬಳಗಕ್ಕೆ, ಮುಖಪುಟ ರಚಿಸಿಕೊಟ್ಟ ಶ್ರೀ ಮುರಳೀಧರ ವಿ. ರಾಥೋಡ್ ಅವರಿಗೆ ವಂದಿಸುತ್ತೇನೆ.

**ಬಿ. ವಿ. ವಸಂತಕುಮಾರ್**
ಅಧ್ಯಕ್ಷರು

# ಲೇಖಕರ ಮಾತು

ಈ ವರ್ಷ ಭಾರತಕ್ಕೆ ಸ್ವಾತಂತ್ರ್ಯ ದೊರೆತು ೭೫ ವಸಂತಗಳು ಪೂರ್ಣಗೊಳ್ಳುತ್ತಿವೆ. ಈ ಸಂದರ್ಭದಲ್ಲಿ ಸ್ವಾತಂತ್ರ್ಯಕ್ಕಾಗಿ ಸಮಾಜ ಮತ್ತು ವ್ಯಕ್ತಿಗಳು ನಡೆಸಿದ ಚಳುವಳಿ, ವಹಿಸಿದ ಪಾತ್ರಗಳ ಅನ್ವೇಷಣೆ–ಅಧ್ಯಯನ ದೃಷ್ಟಿಯಿಂದ ಕರ್ನಾಟಕ ಸಾಹಿತ್ಯ ಅಕಾಡೆಮಿ ಸ್ವಾತಂತ್ರ್ಯದ ಅಮೃತ ಮಹೋತ್ಸವ ಸವಿನೆನಪಿನ ಮಾಲೆಯಲ್ಲಿ ೭೫ ಕಿರು ಕೃತಿಗಳನ್ನು ಪ್ರಕಟಿಸುತ್ತಿರುವುದು ಅತ್ಯಂತ ಔಚಿತ್ಯಪೂರ್ಣವಾದುದು.

ಸ್ವಾತಂತ್ರ್ಯ ಹೋರಾಟದ ರೂಪ–ಸ್ವರೂಪ, ಧ್ಯೇಯ ಧೋರಣೆಗಳು ಬೇರೆ ಬೇರೆ ಪ್ರದೇಶಗಳಲ್ಲಿ ಬೇರೆ ಬೇರೆಯಾಗಿದ್ದವು. ಮುಂಬೈ ಮತ್ತು ಮದ್ರಾಸ್ ಪ್ರದೇಶಗಳಲ್ಲಿ ಈ ಹೋರಾಟ ಆಂಗ್ಲರ ವಿರುದ್ಧವಿದ್ದರೆ, ಮೈಸೂರು ಭಾಗದಲ್ಲಿ ಜವಾಬ್ದಾರಿ ಸರ್ಕಾರದ ಸ್ಥಾಪನೆ ಮತ್ತು ಪರೋಕ್ಷವಾಗಿ ಭಾರತ ಸ್ವಾತಂತ್ರ್ಯಕ್ಕಾಗಿದ್ದಿತು. ಕಲಬುರ್ಗಿ–ಬೀದರ ಪ್ರದೇಶಗಳಲ್ಲಿ ಹೈದರಾಬಾದ ನಿಜಾಮರ ಸಂಸ್ಥಾನದ ರಜಾಕಾರರ ದಬ್ಬಾಳಿಕೆಯ ವಿರುದ್ಧ ನಡೆದ ಹೋರಾಟವಾಗಿತ್ತು. ರಾಮದುರ್ಗ–ಜಮಖಂಡಿ ಮೊದಲಾದ ಸಂಸ್ಥಾನ ರಾಜ್ಯಗಳಲ್ಲಿ ಸರ್ಕಾರದ ಸ್ಥಾಪನೆ ಮತ್ತು ಭಾರತದ ಒಕ್ಕೂಟದಲ್ಲಿ ಈ ಸಂಸ್ಥಾನಗಳ ವಿಲೀನಿಕರಣದ ಉದ್ದೇಶ ಹೊಂದಿದ್ದಿತು. ಈ ಎಲ್ಲ ಬಗೆಯ ಜನಪರ ಹೋರಾಟಗಳಲ್ಲಿ ಸಮಸ್ತ ಕನ್ನಡಿಗರು ಸಕ್ರಿಯವಾಗಿ ಪಾಲುಗೊಂಡರು. ಸ್ವತಂತ್ರ ಸಂಯುಕ್ತ ಪ್ರಜಾಪ್ರಭುತ್ವ ಮತ್ತು ಧರ್ಮನಿರಪೇಕ್ಷ ಗಣರಾಜ್ಯ ಸ್ಥಾಪನೆ ಮೊದಲಾದ ಗುರಿಗಳ ಸಾಫಲ್ಯತೆಗಾಗಿ ಕನ್ನಡಿಗರು ಕ್ರಿಯಾತ್ಮಕವಾಗಿ ಭಾಗವಹಿಸಿದರು.

ಈ ಹಿನ್ನೆಲೆಯಲ್ಲಿ ಬೆಳಗಾವಿ ಪ್ರದೇಶದ ಪ್ರಮುಖ ಹೋರಾಟ ಕೇಂದ್ರಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಈ ಕಿರು ಕೃತಿಯನ್ನು ರಚಿಸಿರುವೆ. ಸ್ವಾತಂತ್ರ್ಯ ಹೋರಾಟ ಕುರಿತು ಈವರೆಗೆ ಬಂದ ಎಲ್ಲ ಕೃತಿಗಳನ್ನು

ಆಮೂಲಾಗ್ರವಾಗಿ ಪರಿಶೀಲಿಸಿ, ಈ ಕೃತಿ ರಚನೆಗೆ ಆಕರವಾಗಿ ಬಳಸಿಕೊಂಡಿದ್ದೇನೆ. ಆ ಎಲ್ಲ ಲೇಖಕ ಮಹನೀಯರಿಗೆ ವಂದನೆಗಳು.

ಇಂಥ ಒಂದು ಮಹತ್ವದ ಯೋಜನೆಯನ್ನು ರೂಪಿಸಿ, ಕ್ಲುಪ್ತ ಅವಧಿಯಲ್ಲಿ ಕೃತಿಗಳನ್ನು ಪ್ರಕಟಿಸುತ್ತಿರುವ ನಮ್ಮ ದಿನಮಾನದ ಕ್ರಿಯಾಶೀಲ ವಿದ್ವಾಂಸರೂ ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷರೂ ಆದ ಡಾ. ಬಿ. ವಿ. ವಸಂತಕುಮಾರ ಅವರಿಗೆ ಅನಂತ ವಂದನೆಗಳು. ಅಕಾಡೆಮಿಯ ರಿಜಿಸ್ಟ್ರಾರ್ ಶ್ರೀ ಎನ್. ಕರಿಯಪ್ಪ ಅವರಿಗೂ ಉಳಿದ ಎಲ್ಲ ಸದಸ್ಯರಿಗೆ ವಂದನೆಗಳು.

ಈ ಯೋಜನೆಯ ಸಂಪಾದಕರಲ್ಲಿ ಒಬ್ಬರಾದ ಡಾ. ಮೃತ್ಯುಂಜಯ ರುಮಾಲೆ ಅವರು ನನ್ನ ಬೆನ್ನ ಹಿಂದಿನ ಶಕ್ತಿಯಾಗಿ, ಕಣ್ಣ ಮುಂದಿನ ಬೆಳಕಾಗಿ ಮಾರ್ಗದರ್ಶನ ಮಾಡಿದ್ದಾರೆ. ಅವರ ಪ್ರೇರಣೆ–ಪ್ರೋತ್ಸಾಹ ಇಲ್ಲದಿದ್ದರೆ ಇಷ್ಟು ಬೇಗ ಈ ಕೃತಿಗಳನ್ನು ರಚಿಸಲು ಸಾಧ್ಯವಿರಲಿಲ್ಲ. ಅವರಿಗೆ ಅನಂತ ವಂದನೆಗಳು. ಸಂಪಾದಕರಾದ ಡಾ. ಎಸ್.ಜಿ.ರಾಮದಾಸ ರೆಡ್ಡಿ, ಡಾ. ಪ್ರಕಾಶ ಗ. ಖಾಡೆ, ಶ್ರೀ ನರೇಂದ್ರಕುಮಾರ ಮತ್ತು ರಾಜಲಕ್ಷ್ಮಿ ಕೋಡಿಬೆಟ್ಟು ಅವರಿಗೆ ಅನಂತ ವಂದನೆಗಳು.

ಆಕರ ಸಾಮಗ್ರಿ ಒದಗಿಸಿಕೊಟ್ಟ ಶ್ರೀ ರಾಯನಗೌಡ ಪಾಟೀಲಡಾ. ಬಿ. ನಂಜುಂಡಸ್ವಾಮಿ, ಡಾ. ಸರಜೂ ಕಾಟ್ಕರ್, ಡಾ. ಬಸವರಾಜ ಜಗಜಂಪಿ, ಡಾ. ಎಂ. ಎಸ್. ಹುಲ್ಲೋಳಿ, ಮೊದಲಾದ ಹಿರಿಯರಿಗೆ ವಂದನೆಗಳು.

**ಪ್ರಕಾಶ ಗಿರಿಮಲ್ಲನವರ**

## ಪರಿವಿಡಿ


| | |
|---|---|
| ಶುಭ ಸಂದೇಶ | ೩ |
| ಶುಭ ಸಂದೇಶ | ೫ |
| ಪ್ರಧಾನ ಸಂಪಾದಕರ ಮಾತು | ೭ |
| ಲೇಖಕರ ಮಾತು | ೧೧ |
| ಸ್ವಾತಂತ್ರ್ಯ ಹೋರಾಟ: ಬೆಳಗಾವಿ | ೧೫–೫೦ |
| ಅಮೃತ ಮಹೋತ್ಸವ ಪ್ರಕಟಣೆ – ೭೫ ಕಿರುಪುಸ್ತಕಗಳ ಪಟ್ಟಿ | ೫೧ |

# ಸ್ವಾತಂತ್ರ್ಯ ಹೋರಾಟ : ಬೆಳಗಾವಿ

ರಾಷ್ಟ್ರೀಯ ಸ್ವಾತಂತ್ರ್ಯಕ್ಕಾಗಿ ನಡೆದ ಐತಿಹಾಸಿಕ ಚಳವಳಿಯ ಸಂದರ್ಭದಲ್ಲಿ ಭಾರತದ ರಾಜ್ಯಗಳಲ್ಲಿ ಕರ್ನಾಟಕ ಯಾವಾಗಲೂ ಮುಂಚೂಣಿಯಲ್ಲಿದ್ದ ಸಂಗತಿ ಅಭಿಮಾನದ್ದು. ಉಪ್ಪಿನ ಸತ್ಯಾಗ್ರಹ, ಸ್ವದೇಶಿ ಚಳವಳಿ, ಸಿಂದಿಗಿಡಗಳ ನಾಶ, ಚಲೇಜಾವ್ ಚಳವಳಿ, ಸಂಪೂರ್ಣ ಸ್ವಾತಂತ್ರ್ಯ–ಹೀಗೆ ಕರ್ನಾಟಕದ ಪಾತ್ರ ತುಂಬ ಮಹತ್ವದ್ದು. ಅಂತೆಯೆ ಬೆಳಗಾವಿ ಜಿಲ್ಲೆ ಆ ದೃಷ್ಟಿಯಿಂದ ಸ್ವಾತಂತ್ರ್ಯ ಸಂಗ್ರಾಮಕ್ಕಾಗಿ ನಡೆದ ಎಲ್ಲ ಹೋರಾಟಗಳಿಗೆ ಅಗ್ರಸ್ಥಾನದಲ್ಲಿತ್ತೆಂಬುದು ಅಭಿಮಾನದ ಸಂಗತಿ. ಕನ್ನಡಿಗರ ಶಿಸ್ತು, ಸಂಯಮ ಹಾಗೂ ಬದ್ಧತೆಗಳು ಆಗೆಲ್ಲ ತುಂಬ ಜನಜನಿತವಾಗಿದ್ದವು.

ಕರ್ನಾಟಕದ ಚರಿತ್ರೆಯಲ್ಲಿ ಬೆಳಗಾವಿ ಜಿಲ್ಲೆಗೆ ಅತ್ಯಂತ ವಿಶಿಷ್ಟ ಸ್ಥಾನವಿದೆ. ೧೮೩೬ರಲ್ಲಿ ಬೆಳಗಾವಿ ನೂತನ ಜಿಲ್ಲೆಯಾಗಿ ಅಸ್ತಿತ್ವಕ್ಕೆ ಬಂತು. ೧೮೩೮ರಲ್ಲಿ ಆಡಳಿತದ ಕೇಂದ್ರ ಸ್ಥಳವಾಯಿತು. ಆ ಸಂದರ್ಭದಲ್ಲಿ ಬೆಳಗಾವಿ 'ವೇಣುಗ್ರಾಮ' ಎಂಬ ಹೆಸರಿನಿಂದ ಪ್ರಸಿದ್ಧವಾಗಿತ್ತು. ಅದು ಬ್ರಿಟಿಷರ ಬಾಯಲ್ಲಿ ಬೆಲ್‌ಗಾಮ್ ಆಗಿ ನಂತರ ಬೆಳಗಾವಿ ಆಯ್ತು. ಉತ್ತರ ದಿಕ್ಕಿನ ಹೆಬ್ಬಾಗಿಲು ಎಂಬುದು ಬೆಳಗಾವಿಯ ಖ್ಯಾತಿ. ಕಿತ್ತೂರು ಕರ್ನಾಟಕ ಎಂದೇ ಗುರುತಿಸಿಕೊಂಡ ಬೆಳಗಾವಿಗೆ ಸಕ್ಕರೆ ಜಿಲ್ಲೆಯೆಂಬ ಹೆಗ್ಗಳಿಕೆಯೂ ಇದೆ.

ಕೃಷ್ಣಾ, ಮಲಪ್ರಭಾ, ಘಟಪ್ರಭಾ, ಮಾರ್ಕಂಡೇಯ, ಹಿರಣ್ಯಕೇಶಿ, ದೂಧಗಂಗಾ ಮತ್ತು ವೇದಗಂಗಾ ಎಂಬ ಏಳು ನದಿಗಳು ಜಿಲ್ಲೆಯ ಜೀವನಾಡಿಗಳು. ಈ ನದಿಗಳು ಜನತೆಯ ಬದುಕಿನ ಸಮೃದ್ಧಿಗೆ ಹಾಗೂ ಸರ್ವಾಂಗೀಣ ಅಭಿವೃದ್ಧಿಗೆ ಮುನ್ನುಡಿ ಬರೆದಿವೆ. ತನ್ನ ಹಿತಕರ ಹವಾಗುಣದಿಂದ ಬೆಳಗಾವಿ ಕರ್ನಾಟಕದ ಕಾಶ್ಮೀರ ಎನಿಸಿದೆ. ಭವ್ಯವಾದ ಸಹ್ಯಾದ್ರಿ ಸಾಲು ಬೆಟ್ಟಗಳು, ಸಹಜ ನೈಸರ್ಗಿಕ ಚೆಲುವು, ಇತಿಹಾಸ–ಸಂಸ್ಕೃತಿ–ಪರಂಪರೆಗಳಿಂದ

ಬೆಳಗಾವಿ ಜಿಲ್ಲೆಗೆ ತನ್ನದೇ ಆದ ಮಹತ್ವ ಇದೆ. ಅಪರೂಪದ ಅನನ್ಯತೆ ಇದೆ. ಶಿಕ್ಷಣ, ಸಾಹಿತ್ಯ, ಸಂಗೀತ, ಶಿಲ್ಪಕಲೆ, ಧರ್ಮ ಇತ್ಯಾದಿಗಳ ಸಿರಿವಂತಿಕೆ ಯಿಂದ ಬೆಳಗಾವಿ ಜಿಲ್ಲೆ ಸಂಸ್ಕೃತಿಯ ತೂಗುತೊಟ್ಟಿಲೆನಿಸಿದೆ. ಕಲೆ–ಸಾಹಿತ್ಯ–ಸಂಸ್ಕೃತಿಗಳ ಆದಾನ–ಪ್ರದಾನ ನಡೆಸುತ್ತ ಸಮಗ್ರ ಹಾಗೂ ಸಂಪದ್ಭರಿತ ಬೆಳವಣಿಗೆ ಹೊಂದಿರುವುದು ಈ ಜಿಲ್ಲೆಯ ವಿಶೇಷ. ಇಲ್ಲಿನ ಮಣ್ಣಿನ ಗುಣವೇ ಅಂಥದು. ಔದಾರ್ಯ ಈ ನೆಲದ ಬದುಕಿನೊಂದಿಗೆ ಹಾಸು ಹೊಕ್ಕಾಗಿದೆ. ಬೆಳಗಾವಿ ಎಲ್ಲಂದದಲ್ಲಿ ಕೊಟ್ಟು ಬೆಳೆಸಿದೆ. ಪಡೆದು ಬೆಳೆದಿದೆ.

ಬೆಳಗಾವಿ ಜಿಲ್ಲೆ ವಿದ್ಯೆ–ವಿದ್ವತ್ತುಗಳಿಗೆ ಹೆಸರಾಗಿದೆ. ತ್ಯಾಗ ಬಲಿದಾನಗಳಿಗೆ ಇದು ಹೆಸರುವಾಸಿ. ವೀರಪರಂಪರೆಗೆ ಬಹುದೊಡ್ಡ ಕೊಡುಗೆಕೊಟ್ಟ ಶ್ರೇಯಸ್ಸು ಈ ಜಿಲ್ಲೆಗಿದೆ. ಪತಿಯ ಮರಣದ ದುಃಖವನ್ನು ಮರೆತು ಪ್ರಜೆಗಳ ಸಂರಕ್ಷಣೆಯ ಹೊಣೆಹೊತ್ತು ಹೋರಾಡಿದ ಬೆಳವಡಿ ಮಲ್ಲಮ್ಮ, ಬ್ರಿಟಿಷರಿಗೆ ಸ್ವಾಭಿಮಾನ ಹಾಗೂ ಸ್ವಾತಂತ್ರ್ಯದ ಪ್ರಥಮ ಪಾಠ ಹೇಳಿಕೊಟ್ಟ ವೀರರಾಣಿ ಕಿತ್ತೂರು ಚನ್ನಮ್ಮ, ಶೂರ ಸಂಗೊಳ್ಳಿ ರಾಯಣ್ಣ ಮೊದಲಾದವರು ಈ ಸಂದರ್ಭದಲ್ಲಿ ಸ್ಮರಣೀಯರು. ಅವರ ಚರಿತ್ರೆ ಎಲ್ಲರಿಗೂ ಗೊತ್ತು. ಆ ವೀರವೀರೆಯರ ಹೋರಾಟದ ಹೆಜ್ಜೆಗುರುತುಗಳನ್ನು ಶ್ರದ್ಧೆನಿಷ್ಠೆಗಳಿಂದ ಬಳಿವಿಡಿದು ಸಾಗಿದ ಸ್ವಾತಂತ್ರ್ಯ ಹೋರಾಟಗಾರರು ರಾಷ್ಟ್ರೀಯ ಚಳವಳಿಯಲ್ಲಿ ಮಹಾಮಾರ್ಗವನ್ನೇ ನಿರ್ಮಿಸಿದರು.

ಬೆಳಗಾವಿ ಅತ್ಯುತ್ತಮ ಶೈಕ್ಷಣಿಕ ಪರಿಸರಕ್ಕೂ ಪ್ರಸಿದ್ಧ. ತನ್ನ ಶೈಕ್ಷಣಿಕ ಗುಣಾತ್ಮಕತೆಯಿಂದ ಸಾಗರೋತ್ತರ ಪ್ರಖ್ಯಾತಿ ಪಡೆದಿದೆ. ಮೂರು ವಿಶ್ವವಿದ್ಯಾಲಯಗಳಿಂದ ಬೆಳಗಾವಿ ಕಲಿಕಾಸ್ತಕರ ಕಾಶಿಯೆನಿಸಿದೆ. ಹದಿನೈದು ತಾಲೂಕುಗಳನ್ನೊಳಗೊಂಡ ಬೆಳಗಾವಿ ಜಿಲ್ಲೆ ರಾಜ್ಯದ ದೊಡ್ಡಜಿಲ್ಲೆ. ಮೂರು ಜಿಲ್ಲೆಗಳ ವ್ಯಾಪ್ತಿ ಇದಕ್ಕಿದೆ. ಇದೀಗ ಕಿತ್ತೂರನ್ನು ಹನ್ನೊಂದನೆಯ ತಾಲೂಕೆಂದು ಘೋಷಿಸಲಾಗಿದೆ.

ರಾಷ್ಟ್ರೀಯ ಆಂದೋಲನದಲ್ಲಿ ಕರ್ನಾಟಕದ ಪಾತ್ರ ಹಿರಿದು. ನಮ್ಮ ದೇಶ ಸ್ವಾತಂತ್ರ್ಯ ಪಡೆಯಬೇಕು. ಕರ್ನಾಟಕದ ಏಕೀಕರಣ ಆಗಬೇಕು ಎಂಬ ಹಂಬಲದ ಕನ್ನಡಿಗರು ತಮ್ಮ ಅದಮ್ಯ ರಾಷ್ಟ್ರೀಯ ಪ್ರಜ್ಞೆಯನ್ನು ಮೆರೆದರು. ಕರ್ನಾಟಕದ ನವನಿರ್ಮಾಣದ ಕಾರ್ಯದಲ್ಲೂ ಶ್ರದ್ಧೆಯಿಂದ ಶ್ರಮಿಸಿದರು.



ಸ್ವಾತಂತ್ರ್ಯ ಹೋರಾಟಕ್ಕೂ ಬೆಳಗಾವಿ ಜಿಲ್ಲೆಗೂ ತುಂಬ ಅಪರೂಪದ ಸಂಬಂಧವಿದೆ. ಬೆಳಗಾವಿ ಜಿಲ್ಲೆ ಸ್ವಾತಂತ್ರ್ಯ ಆಂದೋಲನ ಹಾಗೂ ಸಹಕಾರಿ ಚಳವಳಿಯಲ್ಲಿ ಪಾಲ್ಗೊಂಡಿತು. ಆ ಮೂಲಕ ರಾಷ್ಟ್ರದ ಪ್ರಮುಖ ವಾಹಿನಿಯಲ್ಲಿ ಒಂದಾಯಿತು. ಗಾಂಧೀಜಿ ಹಲವಾರು ಬಾರಿ ಬೆಳಗಾವಿ ಜಿಲ್ಲೆಯ ಹಳ್ಳಿಗಳನ್ನು ಸುತ್ತಿ, ತಮ್ಮ ಭಾಷಣಗಳಿಂದ ರಾಷ್ಟ್ರಧರ್ಮದ ಬಗೆಗೆ ಯುವಕ ಯುವತಿಯರಲ್ಲಿ ಸಂಚಲನ ಮೂಡಿಸಿದರು. ಯುವಶಕ್ತಿಯನ್ನು ಬಳಸಿಕೊಂಡು ರಾಷ್ಟ್ರವನ್ನು ಕಟ್ಟುವ ನಿಟ್ಟಿನಲ್ಲಿ ಅವರ ಹಾಗೆ ಭಾರತದ ಹಳ್ಳಿಗಳನ್ನು ಸುತ್ತಿದ ಮತ್ತೊಬ್ಬ ವ್ಯಕ್ತಿಯಿಲ್ಲ. ಬೆಳಗಾವಿಯಲ್ಲಿ ೧೯೨೪ರಲ್ಲಿ ಜರುಗಿದ ಕಾಂಗ್ರೆಸ್ ಮಹಾಧೀಶವೇಶನದ ಅಧ್ಯಕ್ಷತೆಯನ್ನು ಗಾಂಧೀಜಿಯವರೇ ವಹಿಸಿಕೊಂಡು ಚಳವಳಿಗಾರರಲ್ಲಿ ಹುರುಪು ಹುಮ್ಮಸ್ಸುಗಳನ್ನು ತುಂಬಿದ್ದು ಅತ್ಯಂತ ಅವಿಸ್ಮರಣೀಯ.

ರಾಷ್ಟ್ರಪ್ರೇಮವೆಂದರೆ ದೇಶದ ಭರವಸೆಯೆನಿಸಿದ ಯುವಕರ ಮನಸ್ಸುಗಳನ್ನು ಕಟ್ಟುವುದು. ಅವರಲ್ಲಿ ಉತ್ಸಾಹ ತುಂಬುವುದು. ಜಿಲ್ಲೆಯ ನಾಯಕರು ಈ ಎಲ್ಲ ಸಂಗತಿಗಳನ್ನು ಚೆನ್ನಾಗಿ ಬಲ್ಲವರಾಗಿದ್ದರು. ಅಂತೆಯೆ ಗಾಂಧೀಜಿಯವರ ಆಶಯಕ್ಕೆ ಸಕಾರಾತ್ಮಕವಾಗಿ ಸ್ಪಂದಿಸಿದರು. ಯುವ ಹೋರಾಟಗಾರರ ಪಡೆಯನ್ನು ಕಟ್ಟಿದರು.

ಬೆಳಗಾವಿ ಪ್ರಾಚೀನ ಕಾಲದಿಂದಲೂ ಸದಾ ಸುದ್ದಿಯಲ್ಲಿರುವ ಒಂದು ಐತಿಹಾಸಿಕ ಹಾಗು ಸಾಂಸ್ಕೃತಿಕ ನಗರ. ಶಾಸನಗಳಲ್ಲಿ ಬೆಳ್ವೊಲ, ಕುಹುಂಡಿ ನಾಟಗಳ ಭಾಗವೆನಿಸಿದ ಈ ನಗರವು ವೇಣುಗ್ರಾಮ, ವೇಣುಪುರವೆಂದು ಹೆಸರಾಗಿತ್ತು. ಹಲವು ಪ್ರಥಮಗಳಿಗೆ ಸಾಕ್ಷಿಯಾಗಿ ನಿಂತಿರುವ ಈ ನಗರವು ಇಂದಿಗೂ ಆ ಪರಂಪರೆಯನ್ನು ಮುಂದುವರಿಸಿಕೊಂಡು ಬಂದಿದೆ. ಬ್ರಿಟಿಷರ ಕಾಲದಲ್ಲಿ ಮೊದಲ ಬಾರಿಗೆ ಸ್ವಾತಂತ್ರ್ಯ ಕಹಳೆಯನ್ನೂದಿದ ಮಹಿಳಾ ಮುಕುಟಮಣಿಯಾದ ಕಿತ್ತೂರು ರಾಣಿ ಚೆನ್ನಮ್ಮ ಬೆಳಗಾವಿ ಜಿಲ್ಲೆಯವರು. ೧೮೯೪ರಲ್ಲಿ ಮುಂಬೈ ರಾಜ್ಯದ ರಾಜಕೀಯ ಪರಿಷತ್ತಿನ ಮೊದಲ ಸಭೆ

ಜರುಗಿದ್ದು ಬೆಳಗಾವಿಯಲ್ಲಿಯೇ. ೧೯೨೦ರ ನಾಗಪುರ ಕಾಂಗ್ರೆಸ್ ಅಧಿವೇಶನದಲ್ಲಿ ಕರ್ನಾಟಕ ಪ್ರದೇಶ ಕಾಂಗ್ರೆಸ್ ಕಮಿಟಿ (ಕೆ.ಪಿ.ಸಿ.ಸಿ) ರಚನೆಯಾದಾಗ ಅದರ ಮೊದಲ ಅಧ್ಯಕ್ಷರಾಗಿ ಆಯ್ಕೆಯಾದ ಶ್ರೀ ಗಂಗಾಧರರಾವ ದೇಶಪಾಂಡೆ ಅವರೂ ಬೆಳಗಾವಿಯವರು. ತೀರ ಇತ್ತೀಚೆಗೆ ೨೦೦೬ರಲ್ಲಿ ಕರ್ನಾಟಕ ವಿಧಾನ ಮಂಡಲ ಅಧಿವೇಶನ ಬೆಂಗಳೂರನ್ನು ಬಿಟ್ಟು ಹೊರಗಡೆಗೆ ನಡೆದದ್ದು ಇದ್ದರೆ ಅದೂ ಬೆಳಗಾವಿಯಲ್ಲಿಯೇ, ಹೀಗೆ ಗಡಿನಾಡಿನ ಈ ನಗರ ಉತ್ತರ ಕರ್ನಾಟಕದ ಹೆಬ್ಬಾಗಿಲೆಂದು ಗುರ್ತಿಸಿಕೊಂಡು ಅನೇಕ ಮಹತ್ವಪೂರ್ಣ ಘಟನೆಗಳಿಗೆ ಆಶ್ರಯತಾಣವಾಗಿದೆ. ಅದರಲ್ಲಿ ೧೯೨೪ರಲ್ಲಿ ಜರುಗಿದ ೩೯ನೇ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನವೂ ಒಂದು.

ಬೆಳಗಾವಿ ಕಾಂಗ್ರೆಸ್ ಅಧಿವೇಶನ ಐತಿಹಾಸಿಕ ಎನ್ನುವುದರಲ್ಲಿ ಎರಡು ಮಾತಿಲ್ಲ. ಅದಕ್ಕೆ ನಾವು ಹಲವಾರು ಕಾರಣಗಳನ್ನು ನೀಡಬಹುದು. ಮೊದಲನೆಯದಾಗಿ ಇದು ಸ್ವಾತಂತ್ರ್ಯ ಪೂರ್ವದಲ್ಲಿ ಕರ್ನಾಟಕದಲ್ಲಿ ಜರುಗಿದ ಒಂದೇ ಒಂದು ಅಧಿವೇಶನ. ಅದು ಈ ಬೆಳಗಾವಿ ನಗರದಲ್ಲಿ ಎನ್ನುವುದಾದರೆ, ಎರಡನೆಯದಾಗಿ ಮಹಾತ್ಮಾ ಗಾಂಧೀಜಿಯವರು ಕೇವಲ ಒಂದೇ ಒಂದು ಬಾರಿ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷತೆಯನ್ನು ವಹಿಸಿದ್ದರು. ಅದೂ ಈ ಬೆಳಗಾವಿ ಕಾಂಗ್ರೆಸ್ ಅಧಿವೇಶನದಲ್ಲಿ ಎನ್ನುವುದು ಮತ್ತೊಂದು ಹೆಮ್ಮೆಯ ಸಂಗತಿ.

ಮೂರನೆಯದಾಗಿ ಈ ಅಧಿವೇಶನವು ತೀವ್ರವಾದಿಗಳನ್ನು ಮತ್ತು ಸೌಮ್ಯವಾದಿಗಳನ್ನು ಹಿಂದೂಗಳನ್ನು ಹಾಗೂ ಮುಸ್ಲಿಂರನ್ನು ಕಾಂಗ್ರೆಸ್ಸಿನೊಂದಿಗೆ ಒಂದುಗೂಡಿಸುವುದರ ಮೂಲಕ ಒಂದು ಐಕ್ಯತಾ ಸಮ್ಮೇಳನವಾದುದು ಮಗುದೊಂದು ಹೆಮ್ಮೆಯ ಸಂಗತಿ.

**ಘೋಷಣೆ**

೧೯೨೩ರಲ್ಲಿ ಕಾಕಿನಾಡಲ್ಲಿ ಜರುಗಿದ ೩೮ ನೇ ಕಾಂಗ್ರೆಸ್ ಅಧಿವೇಶನದಲ್ಲಿ ಅದರ ಅಧ್ಯಕ್ಷರಾಗಿದ್ದ ಮೌಲಾನಾ ಮಹಮ್ಮದ ಅಲಿ ಅವರು ಮುಂದಿನ ಕಾಂಗ್ರೆಸ್ ಅಧಿವೇಶನ ೧೯೨೪ರಲ್ಲಿ ಕರ್ನಾಟಕದಲ್ಲಿ ಎಂದು ಘೋಷಿಸಲಾಯಿತು.



ಆದರೆ ಎಲ್ಲಿ ಎಂದು ಸ್ಥಳದ ಬಗ್ಗೆ ಚರ್ಚೆ ನಡೆದಾಗ ಕಾರ್ನಾಡ ಸದಾಶಿವರಾಯರು ಮಂಗಳೂರಿನಲ್ಲಿ ಎಂದು ಹೇಳುತ್ತ ಕಡಲ ತೀರದ ಆ ನಗರದ ಪ್ರಕೃತಿ ಸೌಂದರ್ಯವನ್ನು ಒತ್ತಿ ಹೇಳಿದರೆ, ಕೌಜಲಗಿ ಹನುಮಂತರಾಯರು ಬಿಜಾಪುರದಲ್ಲಿ ಆಗಬೇಕು ಎಂದು ಹೇಳುತ್ತ ಆ ನಗರದ ಐತಿಹಾಸಿಕ ಮಹತ್ವವನ್ನು ಮುಂದು ಮಾಡಿದರು. ಬೆಳಗಾವಿಯಲ್ಲಿ ಜರುಗಿಸಬೇಕು ಎಂದು ವಾದ ಮಂಡಿಸಿದ ಗಂಗಾಧರ ರಾವ್ ದೇಶಪಾಂಡೆಯವರ ಹತ್ತಿರ ಅಂತಹ ಬಲವಾದ ಕಾರಣಗಳಿರಲಿಲ್ಲ. ಆದರೆ ಅಲ್ಲಿ ಅಧಿವೇಶನ ಜರುಗಿಸಿದರೆ ಅದಕ್ಕೆ ಬೇಕಾದ ಹಣ, ಸಂಘ–ಸಂಸ್ಥೆಗಳ ಬೆಂಬಲ ಮತ್ತು ಮುನಸಿಪಾಲಟಿಗಳ ಸಹಕಾರವನ್ನು ಧಾರಾಳವಾಗಿ ಒದಗಿಸುವುದಾಗಿ ಭರವಸೆ ನೀಡಿದರು. ಕೊನೆಗೆ ಯಾವುದು ತೀರ್ಮಾನವಾಗದೆ ನಿರ್ಣಯವನ್ನು ಮತಕ್ಕೆ ಹಾಕಿದಾಗ ಅಧ್ಯಕ್ಷರು ಸಹಿತ ಎಲ್ಲರೂ ಬೆಳಗಾವಿಯನ್ನು ಬೆಂಬಲಿಸಿದಾಗ ಸ್ಥಳದ ಬಗ್ಗೆ ಇದ್ದ ಗೊಂದಲ ನಿವಾರಣೆಯಾಗಿ ಎಲ್ಲರೂ ಕೂಡಿ ಕೆಲಸ ಮಾಡಲು ನಿರ್ಧರಿಸಿದರು.

ಬೆಳಗಾವಿ ಕಾಂಗ್ರೆಸ್ ಅಧಿವೇಶನದ ಸಂಘಟನೆಗಾಗಿ ಮೊದಲು ಸ್ವಾಗತ ಸಮಿತಿಯನ್ನು ರಚಿಸಲಾಯಿತು.

ಸ್ವಾಗತ ಸಮಿತಿ ಅಧ್ಯಕ್ಷರಾಗಿ : ಗಂಗಾಧರರಾವ ದೇಶಪಾಂಡೆ

ಅಡಿಗೆ ಮತ್ತು ಊಟೋಪಚಾರ ಸಮಿತಿ: ಗೋಪಾಲರಾವ ದೇಶಪಾಂಡೆ

ವಸತಿ ಮತ್ತು ವೇದಿಕೆ ಅಲಂಕಾರ ಸಮಿತಿ: ಯಾಳಗಿ ಬಂಧುಗಳು

ಸ್ವಯಂ ಸೇವಕರ ಸಮಿತಿ : ಎನ್.ಎಸ್. ಹರ್ಡೀಕರ

ಗಾಂಧಿ ಕುಟೀರ ಮೇಲ್ವಿಚಾರಣೆ ಸಮಿತಿ: ಮುಂಡಲೀಕಜಿ ಕಾತಗಡೆ

ಖಾದಿ ಗ್ರಾಮೋದ್ಯೋಗ ಮತ್ತು ವಸ್ತು ಪ್ರದರ್ಶನ :ಹನುಮಂತರಾವ್ ಕೌಜಲಗಿ

ಪ್ರಚಾರ ಮತ್ತು ಪ್ರಕಾಶನ ಸಮಿತಿ : ಶ್ರೀ ಆರ್. ಆರ್. ದಿವಾಕರ

ಶೌಚಕೂಪ ಮತ್ತು ಸ್ವಚ್ಛತೆ ವ್ಯವಸ್ಥೆ : ಕಾಕಾಸಾಹೇಬ ಕಾಲೇಲಕರ

ಪ್ರಧಾನ ಕಾರ್ಯದರ್ಶಿಗಳಾಗಿ : ಮಾಧವರಾವ್ ಕೆಂಬಾವಿ,
ಬಿ.ಬಿ.ಪೋದ್ದಾರ, ಎಸ್.ಎಲ್.ಸೋವಾನ್

ಇವರ ಜೊತೆಗೆ ೧೯ ಜನ ಉಪಾಧ್ಯಕ್ಷರು ಆಯ್ಕೆಯಾದರು.ಶ್ರೀ ಗಂಗಾಧರರಾವ ದೇಶಪಾಂಡೆ ಮತ್ತು ಶ್ರೀ ಹರ್ಡೇಕರ ಮಂಜಪ್ಪನವರು ಸಮ್ಮೇಳನದ ಯಶಸ್ಸಿನ ರೂವಾರಿಗಳಾಗಿದ್ದರು. ಇವರ ಜೊತೆಗೆ ಕಾರ್ನಾಡ್ ಸದಾಶಿವರಾವ್, ಚೌಗಲೆ, ಹುಯಲಗೋಳ ನಾರಾಯಣರಾವ, ಕಡಪ ರಾಘವೇಂದ್ರರಾವ, ಆಲೂರ ವೆಂಕಟರಾವ್, ಎನ್. ಎಸ್., ಹರ್ಡೀಕರ, ಬಳ್ಳಾರಿ ಸಭಾಪತಿ ಮೊದಲಿಯಾರ ಕೆ. ವೆಂಟಕರಾವ್ ವೀಣೆ ಶೇಷಣ್ಣ ಹನುಮಂತರಾವ್ ಕೌಜಲಗಿ, ಯಶೋದರಾ ದಾಸಪ್ಪ, ಬಳ್ಳಾರಿ ಸಿದ್ಧಮ್ಮ ಗೌರಮ್ಮ ಎನ್.ಎಸ್.ಸುಬ್ಬರಾವ್ ಭಾರದ್ವಜ ರಾಮಯ್ಯ ಮುಂತಾದ ಗಣ್ಯರು ಪ್ರಮುಖ ಪಾತ್ರ ವಹಿಸಿದರು.

## ಅಧಿವೇಶನದಲ್ಲಿ ಭಾಗವಹಿಸಿದ ರಾಷ್ಟ್ರೀಯ ನೇತಾರರು

ಅಧಿವೇಶನದ ಅಧ್ಯಕ್ಷರಾದ ರಾಷ್ಟ್ರಪಿತ ಮಹಾತ್ಮಾ ಗಾಂಧೀಜಿ. ಸರ್ದಾರ ವಲ್ಲಭಬಾಯಿ ಪಟೇಲ್ ಡಾ. ಬಾಬುರಾಜೇಂದ್ರ ಪ್ರಸಾದ, ರಾಜಾಜಿ, ಮೋತಿಲಾಲ ನೆಹರು, ಜವಾಹರಲಾಲ ನೆಹರು, ಸರೋಜಿನಿ ನಾಯ್ಡು, ಲಾಲಾ ಲಜಪತರಾಯ, ಅಲಿ ಸಹೋದರರು.

## ಸಮ್ಮೇಳನಕ್ಕೆ ಪ್ರತಿನಿಧಿಗಳು

ಈ ಅಧಿವೇಶನಕ್ಕೆ ದೇಶದ ವಿವಿಧ ರಾಜ್ಯಗಳಿಂದ ಒಟ್ಟು ೬೨೩೪ ಜನ ಪ್ರತಿನಿಧಿಗಳು ಬರುವ ನಿರೀಕ್ಷೆ ಇದ್ದಿತು. ಆದರೆ ಒಟ್ಟು ೧೮೪೪ ಪ್ರತಿನಿಧಿಗಳು ಬಂದು ಭಾಗವಹಿಸಿದ್ದರು. ಅದರಲ್ಲಿ

| | |
|---|---|
| ಆಂಧ್ರ ಪ್ರದೇಶದಿಂದ ಅತಿ ಹೆಚ್ಚು ಅಂದರೆ | ೨೯ |
| ಆಸ್ಸಾಂದಿಂದ ಅತಿ ಕಡಿಮೆ | ೦೧ |
| ಕರ್ನಾಟಕದಿಂದ | ೨೩೦ |
| ತಮಿಳು ನಾಡಿನಿಂದ | ೨೯೮ |
| ಮಹಾರಾಷ್ಟ್ರದಿಂದ | ೨೮೬ |
| ಮುಂಬೈನಿಂದ | ೨೦ |
| ಬರ್ಮಾದಿಂದ | ೦೬ |



ಜನ ಪ್ರತಿನಿಧಿಗಳು ಭಾಗವಹಿಸಿದ್ದರು.

## ಸಮ್ಮೇಳನದ ಸ್ಥಳ ಮತ್ತು ಸಿದ್ಧತೆ

ಬೆಳಗಾವಿಯ ಈಗಿನ ಟಿಳಕವಾಡಿ ಬಡಾವಣೆಯ ೧ನೇ ಗೇಟ್ ಮತ್ತು ೨ನೇ ಗೇಟಿನ ಸುಮಾರು ೮೫ ಎಕರೆ ವಿಸ್ತಾರದ ಮೈದಾನದಲ್ಲಿ ಅಧಿವೇಶನವನ್ನು ಆಯೋಜಿಸಲಾಗಿತ್ತು. ಕನ್ನಡಿಗರ ಹೆಮ್ಮೆಯ ಸಾಮ್ರಾಜ್ಯವಾದ ವಿಜಯನಗರದ ಪ್ರಭುಗಳ ಸ್ಮರಣೆಗಾಗಿ ಸಭಾಂಗಣಕ್ಕೆ "ವಿಜಯ ನಗರ" ಎಂದು ಹೆಸರಿಡಲಾಗಿತ್ತು. ಸ್ವಾಗತ ಮಂಟಪವನ್ನು ವಿರೂಪಾಕ್ಷ ದೇವಾಲಯ ಗೋಪುರದ ಮಾದರಿಯಲ್ಲಿ ನಿರ್ಮಿಸಲಾಗಿತ್ತು. ಅದಕ್ಕೆ ವಿದ್ಯುತ್ ದೀಪಾಲಂಕಾರ ಕೂಡ ಮಾಡಲಾಗಿತ್ತು. ಎಂ.ಎಸ್.ಎನ್. ರೈಲ್ವೆ ಅಧಿವೇಶನದ ಸ್ಥಳದಲ್ಲಿ ಒಂದು ವಿಶೇಷ ಧ್ವಜ ನಿಲ್ದಾಣವನ್ನು ನಿರ್ಮಿಸಿತ್ತು.

## ಪಂಪಾ ಸರೋವರ

ಅಧಿವೇಶನಕ್ಕೆ ಆಗಮಿಸುವ ಪ್ರತಿನಿಧಿಗಳಿಗೆ ಕುಡಿಯುವ ನೀರಿನ ವ್ಯವಸ್ಥೆ ಮಾಡಲು ೪೩೭೦ ರೂಪಾಯಿ ೩ ಆಣೆ ಖರ್ಚಿನಲ್ಲಿ 50x40x40 ಅಳತೆಯ ಒಂದು ಬಾವಿಯನ್ನು ನಿರ್ಮಿಸಲಾಯಿತು. ಬಾವಿಯನ್ನು ಅಗೆಯುವ ಕಾಲಕ್ಕೆ ೧೨–೧೩ ವರ್ಷದ ಹರಪನಹಳ್ಳಿ ಎಂಬ ಬಾಲಕ ಕುತೂಹಲದಿಂದ ಇಣುಕಿ ನೋಡುವಾಗ ಕಾಲು ಜಾರಿ ಬಾಯಿಯಲ್ಲಿ ಬಿದ್ದು ಅಸುನೀಗಿದ. ಆಗ ಜನರೆಲ್ಲರೂ ಇದು ಅಪಶಕುನ ಎಂದು ಹೇಳುತ್ತ ಬಾವಿಯನ್ನು ಮುಚ್ಚಲು ಆಗ್ರಹಿಸಿದರು. ಅದೇ ವೇಳೆ, ಅಲ್ಲಿಯೇ ಸಮೀಪದಲ್ಲಿರುವ ಮಿಲಿಟರಿ ಕ್ಯಾಂಪಿನ ಅಧಿಕಾರಿಗಳು ಬಂದು ನೀವು ಇಲ್ಲಿ ಬಾವಿಯನ್ನು ತೋಡಿದರೆ ನಮ್ಮ ಬಾವಿಯ ಸೆಲೆಗಳು ಬತ್ತಿ ನೀರು ಕಡಿಮೆಯಾಗುವುದು ಆದ್ದರಿಂದ ಇಲ್ಲಿ ಬಾವಿ ತೋಡಬಾರದು ಎಂದು ವಿರೋಧಿಸಿದರು. ಆದರೆ ಸ್ವಾಗತ ಸಮಿತಿ ಅಧ್ಯಕ್ಷರಾಗಿದ್ದ ಗಂಗಾಧರರಾವ

ದೇಶಪಾಂಡೆ ಅವರು ಯಾರ ವಿರೋಧವನ್ನು ಲೆಕ್ಕಿಸದೆ ಧೈರ್ಯದಿಂದ ಬಾವಿ ತೋಡುವ ಕಾರ್ಯವನ್ನು ಪೂರ್ಣಗೊಳಿಸಿದರು. ಮತ್ತು ೯೨೯೩ ರೂಪಾಯಿ ವೆಚ್ಚದಲ್ಲಿ ಒಂದು ಫರ್ಲಾಂಗ ದೂರದವರೆಗೆ ಪೈಪಲೈನ್ ಹಾಕಿಸಿ ಅತ್ಯಂತ ವ್ಯವಸ್ಥಿತವಾಗಿ ಕುಡಿಯುವ ನೀರಿನ ಸಿದ್ಧತೆ ಮಾಡಿಸಿದರು. ಈ ಬಾವಿಗೆ ಪಂಪಾ ಸರೋವರ ಎಂದು ನಾಮಕಾರಣ ಮಾಡಲಾಗಿತ್ತು. ಈ ಬಾವಿಯ ನೀರು ಅತ್ಯಂತ ಶುದ್ಧ ಮತ್ತು ರುಚಿಕರವಾಗಿದ್ದು ಅಂದಿನ ದಿನಗಳಲ್ಲಿ ಅರ್ಧ ಬೆಳಗಾವಿಗೇ ಈ ಬಾವಿಯಿಂದ ನೀರು ಸರಬರಾಜು ಮಾಡಲಾಗುತಿತ್ತು. ಈ ಬಾವಿ ಇಂದಿಗೂ ಕೂಡ ಇದ್ದು ಅದನ್ನು ಕಾಂಗ್ರೆಸ್ ಬಾವಿ ಎಂದು ಕರೆಯಲಾಗುತ್ತದೆ. ಪುರಾತತ್ವ ಇಲಾಖೆಯವರು ಅದನ್ನು ಒಂದು ರಾಷ್ಟ್ರೀಯ ಸ್ಮಾರಕವನ್ನಾಗಿ ಮಾಡಿ ಸುರಕ್ಷಿತ ಕಾಯಕಲ್ಪ ನೀಡಿ ರಕ್ಷಿಸಿದ್ದಾರೆ.

### ಅಧ್ಯಕ್ಷರ ಆಯ್ಕೆ

ಬೆಳಗಾವಿ ಕಾಂಗ್ರೇಸ್ ಅಧಿವೇಶನದ ಅಧ್ಯಕ್ಷರನ್ನಾಗಿ ಯಾರನ್ನು ಆಯ್ಕೆ ಮಾಡಬೇಕು ಎಂಬ ಚರ್ಚೆ ಪ್ರಾರಂಭವಾದಾಗ ಎಲ್ಲರ ದೃಷ್ಟಿ ಸರೋಜಿನಿ ನಾಯ್ಡು ಅವರ ಮೇಲಿತ್ತು ಆದರೆ ಇದೆ ವೇಳೆಗೆ ಅಸಹಕಾರ ಚಳುವಳಿ ನಿಮಿತ್ಯ ಬಂಧಿಸಲ್ಪಟ್ಟಿದ್ದ ಗಾಂಧೀಜಿಯವರನ್ನು ಅನಾರೋಗ್ಯದ ಕಾರಣ ಸರಕಾರ ಬಿಡುಗಡೆ ಮಾಡಿತು ಈಗ ಎಲ್ಲರ ದೃಷ್ಟಿ ಗಾಂಧೀಜಿಯವರ ಕಡೆಗೆ ಹೊರಳಿತು. ಎಲ್ಲರೂ ಅವರನ್ನು ವಿನಂತಿಸಿಕೊಂಡಾಗ ಅವರೂ ಸಂತೋಷದಿಂದ ಒಪ್ಪಿಕೊಂಡರು.

### ಖಾದಿ ಕುಟೀರ

ಗಾಂಧೀಜಿಯವರ ವಾಸಕ್ಕಾಗಿ ಸಂಪೂರ್ಣವಾಗಿ ಖಾದಿ ಬಟ್ಟೆಯಿಂದಲೇ ಒಂದು ಕುಟೀರವನ್ನು ನಿರ್ಮಿಸಲಾಯಿತು. ಗಾಂಧೀಜಿ ಅದನ್ನು ಖಾದಿ ಅರಮನೆ ಎಂದು ಕರೆದರು. ಉಳಿದ ಪ್ರತಿನಿಧಿಗಳಿಗಳಿಗೂ ಅಧಿವೇಶನದ ಸ್ಥಳದಲ್ಲಿಯೇ ಸಾಲಾಗಿ ಕುಟೀರಗಳನ್ನು ನಿರ್ಮಿಸಲಾಗಿತ್ತು.

ಸರೋಜಿನಿ ನಾಯ್ಡು, ಚಿತ್ತರಂಜನ ದಾಸ್, ಮೋತಿಲಾಲ ನೆಹರು ಮತ್ತು ಆ್ಯನಿಬಸೆಂಟ್ ಅವರಿಗೆ ದುಬಾರಿಯಾದ ಸುಂದರವಾದ ಅಲೆಶಾನ ವೈಭವದ ಬಂಗಲೆಗಳನ್ನು ವ್ಯವಸ್ಥೆ ಮಾಡಲಾಗಿತ್ತು.



### ಗಾಂಧೀಜಿಯವರ ಪ್ರಾರ್ಥನೆ

ಗಾಂಧೀಜಿಯವರು ನಿತ್ಯ ಪ್ರಾರ್ಥನಾ ಸಮಯದಲ್ಲಿ ಕನ್ನಡದಲ್ಲಿ ಪುರಂದರದಾಸರ ಪದಗಳನ್ನು ಹಾಡಲು ಮೈಸೂರಿನಿಂದ ಗಾಯಕರನ್ನು ಮತ್ತು ವೀಣೆಯನ್ನು ನುಡಿಸಲು ವೀಣೆ ಶೇಷಣ ಅವರನ್ನು ಕರೆಸಲಾಗಿತ್ತು. ಇದರ ಮೇಲ್ವಿಚಾರಣೆಯನ್ನು ಮುದವಿಡು ಕೃಷ್ಣರಾಯರಿಗೆ ವಹಿಸಲಾಗಿತ್ತು.

### ಊಟೋಪಚಾರ

ಅತ್ಯಂತ ರುಚಿಯಾದ ಮತ್ತು ಶುಚಿಯಾದ ಊಟೋಪಚಾರದ ವ್ಯವಸ್ಥೆಯನ್ನು ಮಾಡಲಾಗಿತ್ತು. ಒಂದು ಸಮಯಕ್ಕೆ ೪೦೦೦ ಜನರು ಕೂಡ್ರುವಷ್ಟು ದೊಡ್ಡ ಪೆಂಡಾಲನ್ನು ಹಾಕಿಸಲಾಗಿತ್ತು. ಸಮ್ಮೇಳನದ ಪ್ರತಿನಿಧಿಗಳಿಗೆ ಯಾವುದಕ್ಕೂ ಯಾತಕ್ಕೂ ಕೊರತೆಯಾಗದಂತೆ ಅವರು ತಿಂದಷ್ಟು ತುಪ್ಪ ಉಂಟಷ್ಟು ಶ್ರೀಖಂಡಗಳನ್ನು ಬಡಿಸಲಾಗುತ್ತಿತ್ತು.

### ಅಧಿವೇಶನದ ಆರಂಭ ಮತ್ತು ವಿವಿಧ ಗೋಷ್ಠಿಗಳು

ರೈಲು ಮೂಲಕ ಬೆಳಗಾವಿಗೆ ತಲುಪಿದ ಗಾಂಧೀಜಿಯವರು ರೈಲಿನಿಂದ ಇಳಿದ ತಕ್ಷಣ ಬಾಗಿ ಬೆಳಗಾವಿಯ ಮಣ್ಣನ್ನು ಸ್ಪರ್ಶಿಸಿದರು. ಅಲ್ಲಿಂದ ಅವರನ್ನು ೯೪೨೯ನೇ ನಂಬರಿನ ಒಂದು ತೆರೆದ ವಾಹನದಲ್ಲಿ ಮೆರವಣಿಗೆಯ ಮೂಲಕ ನಿಕಟ ಪೂರ್ವ ಅಧ್ಯಕ್ಷರಾಗಿದ್ದ ಮೌಲಾನಾ ಮಹಮ್ಮದ್ ಅಲಿ ಅವರು ಅಧಿವೇಶನದ ಸ್ಥಳಕ್ಕೆ ಕರೆತಂದರು.

ಪ್ರಥಮ ಬಾರಿಗೆ ರಾಷ್ಟ್ರೀಯ ಧ್ವಜಾರೋಹಣದೊಂದಿಗೆ ಈ ಅಧಿವೇಶನವನ್ನು ಆರಂಭಿಸಲಾಯಿತು. ಇದು ಮುಂದಿನ ಅಧಿವೇಶನಗಳಲ್ಲಿ ಒಂದು ಪರಿಪಾಠವಾಗಿ ಬೆಳೆಯಿತು. ಕನ್ನಡ ಸಾಹಿತ್ಯ ಸಮ್ಮೇಳನಗಳೂ ಸೇರಿದಂತೆ ೨೧-೧೨-೧೯೨೪ ರಿಂದ ೩೦-೧೨-೧೯೨೪ ರ ವರೆಗೆ ಒಟ್ಟು ೧೦ ದಿನಗಳ ಕಾಲ ಈ ಅಧಿವೇಶನ ಜರುಗಿತು.

ಡಿಸೆಂಬರ ೨೧ ರಂದು ಬೆಳಿಗ್ಗೆ ೧೧ ಗಂಟೆಗೆ ವಂದೇ ಮಾತರಂ ಮತ್ತು ಹುಯಲಗೋಳ ನಾರಾಯಣರಾವ್ ಅವರು ರಚಿಸಿದ ಉದಯವಾಗಲಿ

ನಮ್ಮ ಚೆಲುವ ಕನ್ನಡ ನಾಡು ಎಂಬ ಗೀತೆಯನ್ನು ಮೋಹನರಾಗ ಮತ್ತು ಝುಂಪೆ ತಾಳದಲ್ಲಿ ೧೩ ವರ್ಷದ ಬಾಲಕಿ ಗಂಗೂಬಾಯಿ ಹಾನಗಲ್ ಅವರು ಅತ್ಯಂತ ಸುಶ್ರಾವ್ಯವಾಗಿ ಹಾಡುವ ಮೂಲಕ ಸಭಿಕರ ಮೆಚ್ಚುಗೆ ಮತ್ತು ಆನಂದದ ಕರತಾಡನಗಳಿಗೆ ಪಾತ್ರರಾದರು.

ಡಿಸೆಂಬರ ೨೧ ರಿಂದ ೨೩ ರವರೆಗೆ ಕನ್ನಡ ಸಾಹಿತ್ಯ ಸಮ್ಮೇಳನಗಳು ಜರುಗಿದವು. ಹುಯಲಗೋಳ ನಾರಾಯಣರಾವ ಅವರ ನಾಡಗೀತೆ ಸಭಿಕರ ಹೃದಯವನ್ನು ತಟ್ಟಿ ನರನಾಡಿಗಳಲ್ಲಿ ಸಂಚರಿಸಿ ಕನ್ನಡ ನಾಡಿನ ರಚನೆಗೆ ನಾಂದಿ ಹಾಡಿತು. ಕರ್ನಾಟಕ ಏಕೀಕರಣದ ಪ್ರಥಮ ಅಧಿವೇಶನವು ಇದೇ ಸಂದರ್ಭದಲ್ಲಿ ಜರುಗಿತು. ಶ್ರೀ ಸಿದ್ಧಪ್ಪ ಕಂಬಳಿಯವರು ಅದರ ಅಧ್ಯಕ್ಷತೆಯನ್ನು ವಹಿಸಿದ್ದರು. ದಿನಾಂಕ ೨೪ ರಿಂದ ಮೂರು ದಿನಗಳ ಕಾಲ ಹಿಂದು ಮುಸ್ಲಿಂರ ಐಕ್ಯತೆಗಾಗಿ ಖಿಲಾಫತ್ ಸಮ್ಮೇಳನವನ್ನು ಡಾ. ಸೈಫುದ್ದಿನ್ ಖಿಚ್ಲು ಅವರ ಅಧ್ಯಕ್ಷತೆಯಲ್ಲಿ ನಡೆಸಲಾಯಿತು.

ದಿನಾಂಕ ೨೭ ರಂದು ಹಿಂದೂ ಮಹಾಸಭಾದ ಅಧಿವೇಶನವು ಪಂಡಿತ ಮದನ್ ಮೋಹನ ಮಾಲವಿಯಾ ಅವರ ಅಧ್ಯಕ್ಷತೆಯಲ್ಲಿ ನಡೆಯಿತು. ಅವರು ಆಗ ಮಾತನಾಡುತ್ತ ಹಿಂದುಗಳ ಮತಾಂತರದ ವಿರುದ್ಧ ಉಗ್ರವಾಗಿ ಟೀಕಿಸಿದರು.

ದಿನಾಂಕ ೨೮ ರಂದು ಬ್ರಾಹ್ಮಣೇತರ ಸಮ್ಮೇಳನವು ಅರ್ಕಾಟ್ ರಾಮಸ್ವಾಮಿ ಮೊದಲಿಯಾರ್ ಅವರ ಅಧ್ಯಕ್ಷತೆಯಲ್ಲಿ ಜರುಗಿತು. ಇದರಲ್ಲಿ ಶಿಕ್ಷಣ, ಸಾಮಾಜಿಕ ಸಮಾನತೆ, ಬ್ರಿಟಿಷ್ ಕಾಯ್ದೆಗಳು ಮತ್ತು ನ್ಯಾಯಾಡಳಿತದ ಹಿರಿಮೆಯನ್ನು ಕುರಿತು ವಿಚಾರಗಳನ್ನು ಮಂಡಿಸಲಾಯಿತು.

ದಿನಾಂಕ ೨೯ ರಂದು ಅಖಿಲ ಭಾರತ ಸಾಮಾಜಿಕ ಸಮ್ಮೇಳನವು ಶಂಕರನ್ ನಾಯರ್ ಅವರ ಅಧ್ಯಕ್ಷತೆಯಲ್ಲಿ ಜರುಗಿತು. ಇದರಲ್ಲಿ ರಾಜಕೀಯದಲ್ಲಿ ಮಹಿಳೆಯರ ಸ್ಥಾನಮಾನ ಕುರಿತು, ವಿಚಾರ ಮಂಡಿಸಲಾಯಿತು. ದಿನಾಂಕ ೩೦ ರಂದು ಅಖಿಲ ಭಾರತ ಸಂಸ್ಥಾನಗಳ ಸಮ್ಮೇಳನ ಜರುಗಿತು. ಶ್ರೀ ಎನ್.ಪಿ. ಖೇಲ್ಕರ್ ಅವರು ಸಂಸ್ಥಾನಗಳಲಿ ಜವಾಬ್ದಾರಿ ಸರ್ಕಾರಗಳು ಎಂಬ ವಿಷಯ ಕುರಿತು ಮಾತನಾಡಿದರು.



ಹೀಗೆ ರಾಷ್ಟ್ರೀಯತೆ, ಹರಿಜನೋದ್ಧಾರ ಅಸ್ಪೃಶ್ಯತಾ ನಿವಾರಣೆ, ಖಾದಿ ಪ್ರಚಾರ, ಪಾನ ನಿರೋಧ, ಹಿಂದು ಮುಸ್ಲಿಂ ಐಕ್ಯತೆ, ಬ್ರಾಹ್ಮಣೇತರರ ಐಕ್ಯತೆ, ಮೂಲ ಶಿಕ್ಷಣ, ಗ್ರಾಮ ನೈರ್ಮಲ್ಯ, ಗುಡಿ ಕೈಗಾರಿಕೆಗಳು ಮುಂತಾದ ವಿಷಯಗಳ ಮೇಲೆ ಗೋಷ್ಠಿಗಳು ನಡೆದು ಹಲವು ಮಹತ್ವಪೂರ್ಣ ನಿರ್ಣಯಗಳು ಹೊರಹೊಮ್ಮಿದವು. ಆ ಮೂಲಕ ಬೆಳಗಾವಿ ಕಾಂಗ್ರೆಸ್ ಅಧಿವೇಶನವು ಕರ್ನಾಟಕವೇ ಅಲ್ಲದೇ ರಾಷ್ಟ್ರಮಟ್ಟದಲ್ಲಿ ರಾಷ್ಟ್ರೀಯ ಜಾಗೃತಿಯನ್ನುಂಟು ಮಾಡುವಲ್ಲಿ ಯಶಸ್ವಿಯಾಯಿತು.

## ಅಧಿವೇಶನದಲ್ಲಿ ಭಾಷಣ ಮಾಡಿದ ನೇತಾರರು

ಅಧಿವೇಶನವನ್ನು ಉದ್ದೇಶಿಸಿ ಬ್ರಹ್ಮ ದೇಶದಿಂದ ಪ್ರತಿನಿಧಿಗಳಾಗಿ ಬಂದಿದ್ದ ಎಸ್.ಎ.ಎಸ್. ತ್ಯಾಬಜಿ ಮತ್ತು ವಿ. ಮದನ್‌ಜೀತ್ ಅಲ್ಲದೆ ರಾಷ್ಟ್ರೀಯ ನೇತಾರರಾದ ಮೋತಿಲಾಲ ನೆಹರು, ಮೌಲಾನಾ ಶೌಕತ್ ಅಲಿ, ಲಾಲಾ ಲಜಪತರಾಯ, ಮೌಲಾನಾ ಜಾಫರ್ ಅಲಿಖಾನ್ ಎಲ್. ಬಿ. ಬೋಪಟಕರ್ ಬಾಬು ಸೆಲ್ವನಾಥ ಬಸೆ ಸರೋಜಿನಿ ನಾಯ್ಡು ಆರ್.ಕೆ. ಷಣ್ಮುಗಂ, ಚೆಟ್ಟಿಯಾರ್ ಎಸ್. ಶ್ರೀನಿವಾಸ ಐಯ್ಯಂಗಾರ, ಡಾ. ಅನಿಬೆಸೆಂಟ್, ಟಿ. ಪ್ರಕಾಶಂ ಸರ್ದಾರ ಮಂಗಲಸಿಂಗ್ ಮುಂತಾದವರು ಮಾತನಾಡಿದರು.

## ಅಧ್ಯಕ್ಷರ ಭಾಷಣದ ಮುಖ್ಯಾಂಶ

ಅಧಿವೇಶನದ ಅಧ್ಯಕ್ಷತೆಯನ್ನು ವಹಿಸಿದ್ದ ರಾಷ್ಟ್ರಪಿತ ಮಹಾತ್ಮಾ ಗಾಂಧೀಜಿಯವರು ಅಧಿವೇಶನವನ್ನು ಉದ್ದೇಶಿಸಿ ಮಾತನಾಡುತ್ತ "ಧರ್ಮಗಳನ್ನು ರಾಷ್ಟ್ರಗಳಂತೆ ತೂಗಿ ಅಳೆಯಬೇಕು, ಅನ್ಯಾಯ ಅಧರ್ಮ ಮತ್ತು ಹಿಂಸೆಗಳನ್ನು ಆಚರಿಸುವ ರಾಷ್ಟ್ರಗಳು ಮತ್ತು ಧರ್ಮಗಳು ಈ ಭೂಮಿಯಿಂದ ಅಳಿಸಿ ಹೋಗುತ್ತವೆ. ದೇವರ ಕೃಪೆ ಮತ್ತು ದಿವ್ಯಜ್ಞಾನವು ಯಾವುದೇ ದೇಶ ಅಥವಾ ಜನಾಂಗದ ಸ್ವತ್ತಲ್ಲ ದೇವರನ್ನು ನಂಬುವವರಿಗೆಲ್ಲರಿಗೂ ಅವು ಸಮಾನವಾಗಿ ದೊರೆಯುತ್ತವೆ. ದೇವರು ಬೆಳಕೆ ಹೊರತು ಕತ್ತಲೆಯಲ್ಲ. ಸತ್ಯವೇ ಹೊರತು ಅಸತ್ಯವಲ್ಲ. ಆತ ಸರ್ವಶಕ್ತನು ನಾವು ಅವರ ಸೃಷ್ಟಿಯ ಕಣಗಳು ನಾವು ವಿನೀತರಾಗೋಣ ದೀನರನ್ನು ಮಾನ್ಯ ಮಾಡೋಣ ದಯವೇ ಧರ್ಮದ ಮೂಲ"

ಹೀಗೆ ಗಾಂಧೀಜಿಯವರು ತಮ್ಮ ಭಾಷಣದಲ್ಲಿ ಅಸ್ಪೃಶ್ಯತೆಯ ಆಚರಣೆಯ ವಿರುದ್ಧ ಎಚ್ಚರಿಸುತ್ತ ಸ್ವರಾಜ್ಯ ಸ್ಥಾಪನೆಗೆ ಅಸ್ಪೃಶ್ಯತೆಯೂ ಒಂದು ಅಡ್ಡಿ ಹಿಂದು ಮುಸ್ಲಿಂರ ಐಕ್ಯತೆ ಎಷ್ಟು ಮಹತ್ವವೋ ಅಸ್ಪೃಶ್ಯತೆ ನಿವಾರಣೆಯೂ ಅಷ್ಟೇ ಮಹತ್ವದ್ದು ಎಂದು ಹೇಳಿದರು.

ಗಾಂಧೀಜಿಯವರು ತಮ್ಮ ಭಾಷಣದಲ್ಲಿ 'ದಯವೇ ಧರ್ಮದ ಮೂಲ' ಎಂಬ ಮಾತನ್ನು ಉದ್ಧರಿಸಿರುವುದನ್ನು ನೋಡಿದರೆ ಅವರ ಮೇಲೆ ಕರ್ನಾಟಕದ ೧೨ನೇ ಶತಮಾನದ ಸಮಾಜ ಸುಧಾರಕ ವಿಶ್ವಗುರು ಬಸವಣ್ಣನವರ ಪ್ರಭಾವ ಸಾಕಷ್ಟು ಆಗಿತ್ತು ಎಂಬುದು ತಿಳಿದು ಬರುತ್ತದೆ. ಅಸ್ಪೃಶ್ಯತೆಯ ನಿವಾರಣೆಯಲ್ಲಿ ಬಸವಣ್ಣ ತಮಗೆ ಆದರ್ಶ ಪುರುಷ ಎಂದು ಗಾಂಧೀಜಿ ಬಗೆದರು. ಇದೇ ಸಂದರ್ಭದಲ್ಲಿ ಹರ್ಡೇಕರ ಮಂಜಪ್ಪನವರು ತಾವು ಬರೆದ "ಸತ್ಯಾಗ್ರಹಿ ಬಸವೇಶ್ವರ" ಎಂಬ ಚಿಕ್ಕ ಪುಸ್ತಕವನ್ನು ಭಿಡೆ ಲಕ್ಷ್ಮಣರಾಯರಿಂದ ಹಿಂದಿ ಮತ್ತು ಮರಾಠಿ ಭಾಷೆಗೆ ಭಾಷಾಂತರಿಸಿ ಗಾಂಧೀಜಿ ಸೇರಿದಂತೆ ಕಾಂಗ್ರೆಸ್ಸಿನ ಮುಖಂಡರಿಗೆಲ್ಲ ಉಚಿತವಾಗಿ ಹಂಚಿದರು. ಈ ಪುಸ್ತಕಗಳ ಮುದ್ರಣ ವೆಚ್ಚವನ್ನು ಶ್ರೀ ಕೆ. ಸಾಬೋಜಿ ಗಂಗಾಧರಪ್ಪನವರು ವಹಿಸಿಕೊಂಡಿದ್ದರು. ಅಷ್ಟೇ ಅಲ್ಲ ಮಂಜಪ್ಪನವರು ತಾವು ನಡೆಸುತ್ತಿದ್ದ ಶರಣ ಸಂದೇಶ ಪತ್ರಿಕೆಗೆ ಗಾಂಧೀಜಿಯವರ ಸಂದೇಶ ಕೇಳಿದಾಗ "ಸತ್ಯದ ವಿನಾ ಬೇರೆ ಧರ್ಮವಿಲ್ಲ" ಎಂಬ ಸಂದೇಶ ನೀಡಿದರು. ಮುಂದೆ ಆಲಮಟ್ಟಿಯ ವಿದ್ಯಾಲಯದಲ್ಲಿ ವಿದ್ಯಾರ್ಥಿಗಳಿಗೆ ಸತ್ಯದ ಸಂದೇಶವನ್ನು ನೀಡಿದರು. ಆಗ ನಡೆದ ಸಂಭಾಷಣೆಯಲ್ಲಿ ಬಸವಣ್ಣನವರು ತುಕಾರಾಮರಂತೆ ಒಬ್ಬ ಸಾಧು ಸತ್ಪುರುಷರಿರಬಹುದು ಎಂದು ತಾವು ತಿಳಿದಿರುವುದಾಗಿ ಹೇಳಿದರು. ಆಗ ಹರ್ಡೇಕರ ಮಂಜಪ್ಪನವರು ಅದು ಹಾಗಲ್ಲ ಬಸವಣ್ಣನವರು ಗುರುನಾನಕರಂತೆ ಒಬ್ಬ ಮತಸ್ಥಾಪಕರು. ಅವರ ಮತದಲ್ಲಿ ವರ್ಣಗಳಿರುವುದಿಲ್ಲವೆಂದು ಹೇಳಿದಾಗ ಗಾಂಧೀಜಿಯವರಿಗೆ ಬಸವಣ್ಣನವರ ಬಗ್ಗೆ ಅಭಿಮಾನವೆನಿಸಿತು.

ಮೇಲಿನ ಈ ಎರಡೂ ಪ್ರಸಂಗಗಳನ್ನು ಅವಲೋಕಿಸಿದಾಗ ಗಾಂಧೀಜಿಯವರು ಬಸವಣ್ಣನವರ ಸಿದ್ಧಾಂತಗಳನ್ನು ಮೆಚ್ಚಿಕೊಂಡಿದ್ದರು ಹಾಗೂ ಅವುಗಳ ಆಚರಣೆಯ ಮಹತ್ವವನ್ನು ಮನಗಂಡಿದ್ದರು ಎಂದು ತಿಳಿಯುತ್ತದೆ.



### ಅಧಿವೇಶನದ ಠರಾವುಗಳು

ಬೆಳಗಾವಿ ಕಾಂಗ್ರೆಸ್ ಅಧಿವೇಶನದಲ್ಲಿ ಮುಖ್ಯವಾಗಿ ಆರು ಠರಾವುಗಳನ್ನು ಸರ್ವಾನುಮತದಿಂದ ಅನುಮೋದಿಸಲಾಯಿತು ಅವುಗಳೆಂದರೆ–

೧. ಕಾಂಗ್ರೆಸ್ ಸಂಸ್ಥೆಗೆ ಆಯ್ಕೆಗೊಂಡ ಸದಸ್ಯರು ಪ್ರತಿತಿಂಗಳು ಆರು ಸಾವಿರ ಅಡಿ ನೂಲನ್ನು ನೂಲಬೇಕು ಮತ್ತು ಕಾಂಗ್ರೆಸ್ಸಿಗರೆಲ್ಲ ಇನ್ನು ಮುಂದೆ ಖಾದಿ ಬಟ್ಟೆಯನ್ನೇ ಧರಿಸಬೇಕು.

೨. ೧೯೨೪ರಲ್ಲಿ ಗಾಂಧೀಜಿ ಮೋತಿಲಾಲ ನೆಹರು ಮತ್ತು ಚಿತ್ತರಂಜನ್ ದಾಸ್ ಅವರ ನಡುವೆ ಪಾಟ್ನಾದಲ್ಲಿ ಆದ ಕಾಂಗ್ರೆಸ್‌ನ್ನು ಸ್ವರಾಜ್ಯ ಪಕ್ಷದವರ ಕಡೆಗೆ ಕೊಡಬೇಕು" ಎಂಬ ಒಪ್ಪಂದವನ್ನು ದೃಢೀಕರಿಸಲಾಯಿತು.

೩. ಕೋಹಟದಲ್ಲಿ ಹಿಂದೂ ಜನರ ಮೇಲೆ ನಡೆದ ದಬ್ಬಾಳಿಕೆಯನ್ನು ಖಂಡಿಸಲಾಯಿತು. ಮತ್ತು ಅಲ್ಲಿನ ಹಿಂದೂಗಳಿಗೆ ಮುಸ್ಲಿಂರು ಸಂರಕ್ಷಣೆ ನೀಡಬೇಕು ಎಂದು ಕೇಳಲಾಯಿತು.

೪. ಅಸ್ಪೃಶ್ಯತೆಯನ್ನು ಹೋಗಲಾಡಿಸಲು ಪ್ರತಿಯೊಬ್ಬರು ಶ್ರಮಿಸಬೇಕು. ಮತ್ತು ಅದು ನಮ್ಮಿಂದಲೇ ಪ್ರಾರಂಭವಾಗಬೇಕು.

೫. ರಾಷ್ಟ್ರೀಯ ಹಾಗೂ ಸಾರ್ವಜನಿಕ ಸೇವೆಗಾಗಿ ಸಂಬಳ ಪಡೆದರೆ ಅದು ತಪ್ಪಲ್ಲ.

೬. ಸರೋಜಿನಿ ನಾಯ್ಡು ವೇಸ್ ಬನಾರಸಿದಾಸ್, ಚತುರ್ವೇದಿ ಇವರು ವಿದೇಶಗಳಲ್ಲಿ ನಮ್ಮ ದೇಶದ ಸ್ವಾತಂತ್ರ್ಯ ಚಳುವಳಿಯನ್ನು ಪ್ರಚಾರ ಮಾಡಿದ್ದಕ್ಕೆ ಅವರನ್ನು ಅಭಿನಂದಿಸಲಾಯಿತು.

### ಅಧಿವೇಶನದ ಫಲಶ್ರುತಿಗಳು

ಈ ಅಧಿವೇಶನವು ಕಾಂಗ್ರೆಸ್‌ನೊಂದಿಗೆ ಮುನಿಸಿಕೊಂಡಿದ್ದ ಸ್ವರಾಜ್ಯ ಪಕ್ಷದವರನ್ನೂ ಮತ್ತು ಮುಸ್ಲಿಂರನ್ನು ಪುನಃ ಕಾಂಗ್ರೆಸ್‌ನೊಂದಿಗೆ ಒಂದುಗೂಡಿಸುವುದರ ಮೂಲಕ ಒಂದು ಐಕ್ಯತಾ ಸಮ್ಮೇಳನವೆಂಬ ಖ್ಯಾತಿಗೆ ಪಾತ್ರವಾಯಿತು.

ಸಿ.ಆರ್.ದಾಸ್ ಅವರಿಗೆ ಸ್ವರಾಜ್ಯ ಪಕ್ಷ ಕಟ್ಟಲು ಗಾಂಧೀಜಿಯವರು ಅನುಮತಿ ನೀಡಿದರು.

ಕರ್ನಾಟಕದ ಕಾಂಗ್ರೆಸ್ ಹೋರಾಟಗಾರರಿಗೆ ಈ ಅಧಿವೇಶನ ಉತ್ತೇಜನ ನೀಡಿತು.

ಈ ಅಧಿವೇಶನದಲ್ಲಿಯೇ ಕರ್ನಾಟಕ ಏಕೀಕರಣ ಸಭಾ ಎಂಬ ಸಂಸ್ಥೆಯನ್ನು ಸ್ಥಾಪಿಸಲಾಯಿತು. ಇದೇ ಮುಂದೆ ಕರ್ನಾಟಕ ಏಕೀಕರಣ ಸಂಘವಾಗಿ ಸ್ವಾತಂತ್ರ್ಯದ ಜೊತೆಗೆ ಕರ್ನಾಟಕದ ಏಕೀಕರಣಕ್ಕಾಗಿಯೂ ಕೂಡ ಹೋರಾಡಿತು.

**ಅಧಿವೇಶನದ ಖರ್ಚು ವೆಚ್ಚಗಳು**

ಈ ಅಧಿವೇಶನಕ್ಕೆ ಒಟ್ಟು ೨,೨೦,೮೨೯ ರೂಪಾಯಿ ೫ ಆಣೆ ಮತ್ತು ೬ ಪೈಸೆ ಖರ್ಚಾಯಿತು.

**ವೆಚ್ಚದ ವಿವರಗಳು:**

| | |
|---|---|
| ವರ್ಕ್ಸ ಕಮೀಟಿ | ೪೪೪೯೩ ರೂಪಾಯಿ ೨ ಆಣೆ |
| ಊಟೋಪಚಾರ | ೨೮೩೧೭ ರೂಪಾಯಿ ೭ ಆಣೆ ೬ ಪೈಸೆ |
| ಗಾಂಧೀಜಿ ಮತ್ತು ಅವರ ಸಂಗಡಿಗರಿಗೆ | ೩೯೪ ರೂಪಾಯಿ |

**ಮಾಡಿದ ವೆಚ್ಚ**

ಜಮಾಹಣದ ವಿವರ

| | |
|---|---|
| ಸ್ವಾಗತ ಸಮಿತಿ ಸದಸ್ಯರಿಂದ ವಂತಿಗೆ | ೧,೦೧೯,೪೨೦ ರೂ. ೧ ಆಣೆ |
| ಸಂದರ್ಶಕರ ಟಿಕೇಟ್ ಶುಲ್ಕದಿಂದ | ೨೯,೩೯೦ ರೂಪಾಯಿ |

ಪ್ರತಿ ಕಾಂಗ್ರೇಸ್ ಅಧಿವೇಶನದಲ್ಲಿ ಕೊಡುವ ಪ್ರತಿನಿಧಿ ಶುಲ್ಕದ ಒಂದು ಭಾಗವನ್ನು ಅಖಿಲ ಭಾರತ ಕಾಂಗ್ರೇಸ್ ಕಮೀಟಿಗೆ ಕೊಡಬೇಕು ಎಂಬ ನಿಯಮವಿದ್ದಿತು. ಆದರೆ ಅನೇಕ ಸಮ್ಮೇಳನಗಳಲ್ಲಿ ಈ ಹಣವನ್ನು ಯಾರೂ ಸರಿಯಾಗಿ ಕೊಟ್ಟಿರಲಿಲ್ಲ. ಕೊಟ್ಟರೂ ವರ್ಷ ಎರಡು ವರ್ಷ ಕಳೆದ ಮೇಲೆಯೇ ಕೊಟ್ಟಿದ್ದರು. ಆದರೆ ಬೆಳಗಾವಿ ಕಾಂಗ್ರೇಸ್ ಅಧಿವೇಶನ ಮುಕ್ತಾಯವಾದ ದಿನವೇ ೮೦೦೦ ರೂಪಾಯಿ ಚೆಕ್ಕನ್ನು ಗಂಗಾಧರರಾವ್ ದೇಶಪಾಂಡೆ ಅವರು ಅ. ಭಾ. ಕಾಂಗ್ರೇಸ್ ಕೋಶಾಧ್ಯಕ್ಷರಾಗಿದ್ದ ಜಮುನಾಲಾಲ್ ಬಜಾಜ ಅವರ ಕೈಗಿತ್ತರು. ಅಧಿವೇಶನದ ಖರ್ಚು ವೆಚ್ಚಗಳನ್ನೆಲ್ಲ ಕಳೆದು ಒಟ್ಟು ೩೦,೦೦೦ ರೂಪಾಯಿ ಉಳಿತಾಯವಾಗಿತ್ತು. ಈ ಹಣವನ್ನು ಕರ್ನಾಟಕ ಪ್ರದೇಶ ಕಾಂಗ್ರೆಸ್ ಕಮಿಟಿಗೆ (ಕೆ.ಪಿ.ಸಿಸಿ) ಅದರ ಕಾರ್ಯ ಚಟುವಟಿಕೆಗಳಿಗೆ ನೀಡಲಾಯಿತು.



೧೯೨೫ ಮೇ ೩೧ಕ್ಕೆ ಕಾಂಗ್ರೇಸ್ ಪದಾಧಿಕಾರಿಗಳಾದ ಎಸ್.ಎಸ್. ಪೂಜಾರಿ ಹಾಗೂ ಕೆ. ಪಾಂಡುರಂಗರಾವ್ ಅವರು ಲೆಖ್ಖಪತ್ರ ಪರಿಶೀಲಿಸಿ ಸರಿಯಾಗಿದೆ ಎಂದು ಪ್ರಮಾಣ ಪತ್ರ ನೀಡಿದರು.

**ಅಧಿವೇಶನದ ಮಹತ್ವ**

ಕರ್ನಾಟಕದ ಜನರಿಗೆ ತಾವು ಅದುವರೆಗೆ ಕೇಳಿದ್ದ ಪತ್ರಿಕೆಯಲ್ಲಿ ಓದಿದ್ದ, ರಾಷ್ಟ್ರೀಯ ನಾಯಕರನ್ನೆಲ್ಲ ಪ್ರತ್ಯಕ್ಷವಾಗಿ ನೋಡುವ ಅವಕಾಶ ಕನ್ನಡಿಗರಿಗೆ ದೊರಕಿತು. ಅದಕ್ಕಾಗಿ ಕರ್ನಾಟಕದ ಮೂಲೆ ಮೂಲೆಗಳಿಂದ ಜನಸಾಗರ ಹರಿದು ಬಂದಿತ್ತು.

ಇದುವರೆಗೆ ಕಾಂಗ್ರೆಸ್ ಬರಿ ಸ್ವಾತಂತ್ರ್ಯ ಹೋರಾಟಕ್ಕೆ ಮೀಸಲಾಗಿದ್ದ ರಾಜಕೀಯ ಸಂಸ್ಥೆಯಾಗಿತ್ತು. ಆದರೆ ಈ ಅಧಿವೇಶನದಲ್ಲಿ ಅಧ್ಯಕ್ಷೀಯ ಭಾಷಣ ಮಾಡಿದ ಗಾಂಧೀಜಿಯವರು ಭಾರತದ ಸಾಮಾಜಿಕ ಸಮಸ್ಯೆಗಳ ಬಗ್ಗೆ ಪ್ರಸ್ತಾಪಿಸಿ ಕಾಂಗ್ರೆಸ್ ಸಮಾಜ ಸುಧಾರಣೆಗಾಗಿಯೂ ಶ್ರಮಿಸುವ ಅಗತ್ಯವನ್ನು ಒತ್ತಿ ಹೇಳುವುದರ ಮೂಲಕ ಅದನ್ನು ಸಾಮಾಜಿಕ ಸಮಸ್ಯೆಗಳ ವಿರುದ್ಧದ ಹೋರಾಟಕ್ಕೂ ಅಣಿಗೊಳಿಸಿದರು.

ಎನ್.ಎಸ್. ಹರ್ಡೀಕರ್ ಅವರಿಂದ ತರಬೇತಿ ಪಡೆದ ಸೇವಾದಳದ ಕಾರ್ಯಕರ್ತರು ನಿರ್ವಹಿಸಿದ ಶಾಂತಿಪಾಲನಾ ಕಾರ್ಯ ಮತ್ತು ಅತಿಶಿಸ್ತಿನ ಸೇವಾ ಮನೋಭಾವವು ಎಲ್ಲ ನಾಯಕರ ಮೆಚ್ಚುಗೆಗೆ ಪಾತ್ರವಾದದ್ದಲ್ಲದೆ ಶ್ರೀ ಎನ್.ಎಸ್. ಹರ್ಡೀಕರ ಅವರಿಗೆ ಒಳ್ಳೆಯ ಹೆಸರನ್ನು ತಂದುಕೊಟ್ಟು ಅವರು ರಾಷ್ಟ್ರೀಯ ನಾಯಕರಾಗಿ ಬೆಳೆಯಲು ಸಹಾಯವಾಯಿತು.

ಶೌಚಕೂಪ ಮತ್ತು ಸ್ವಚ್ಛತೆ ವ್ಯವಸ್ಥೆಯ ಮೇಲ್ವಿಚಾರಣೆ ಜವಾಬ್ದಾರಿ ಹೊತ್ತ ಕಾಕಾಸಾಹೇಬ ಕಾಲೇಲಕರ್ ಅವರು 'ಬಂಗಿ ಬಳಿಯುವುದು ಶೂದ್ರರ ಕೆಲಸ ಎನ್ನುವ ತಪ್ಪು ಸಂದೇಶವನ್ನು ನಾವು ಹೋಗಲಾಡಿಸಬೇಕು. ಅದಕ್ಕಾಗಿ

ಈ ಕೆಲಸವನ್ನು ಮೇಲ್ವರ್ಗದವರು ಎಂದು ಕರೆಯಿಸಿಕೊಳ್ಳುವವರು ನಾವೇ ಮಾಡಬೇಕು" ಎಂಬ ಸೂಚನೆಯನ್ನು ಮುಂದಿಟ್ಟಾಗ ನೂರಾರು ಬ್ರಾಹ್ಮಣ ಯುವಕರು ಆ ಕೆಲಸವನ್ನು ಮಾಡಲು ಬಂದರು. ಈ ಮೂಲಕ ಅಸ್ಪೃಶ್ಯತೆ ನಿವಾರಣೆ ಮತ್ತು ಶ್ರಮ ಗೌರವದ ಮಹತ್ವವನ್ನು ಎತ್ತಿ ಹಿಡಿದರು.

ಕಾಂಗ್ರೆಸ್ ಬ್ರಾಹ್ಮಣರ ಸಂಸ್ಥೆ ಎಂದು ವಿರೋಧಿಸಿ ಅದರ ಚಟುವಟಿಕೆಗಳಿಂದ ಅದುವರೆಗೂ ದೂರ ಉಳಿದಿದ್ದ ಉತ್ತರ ಕರ್ನಾಟಕದ ಬಹುಸಂಖ್ಯಾತ ಲಿಂಗಾಯತರು ಈ ಅಧಿವೇಶನದಿಂದ ಕಾಂಗ್ರೆಸ್ಸಿಗೆ ಹತ್ತಿರವಾದರು. ಹರ್ಡೇಕರ ಮಂಜಪ್ಪನವರ'ಬಸವೇಶ್ವರ ಸೇವಾದಳ' ಅಧಿವೇಶನದಲ್ಲಿ ಸ್ವಯಂ ಕಾರ್ಯಕರ್ತರಾಗಿ ದುಡಿದು ಅಧಿವೇಶನದ ಯಶಸ್ಸಿಗೆ ಪ್ರಯತ್ನಸಿದ್ದು ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು.

ಬೆಳಗಾವಿಯ ಸರ್ದಾರ ವೀರನಗೌಡರು ಆ ಕಾಲದ ಲಿಂಗಾಯತ ಮುಖಂಡರು ಹಾಗೂ ಕೆ.ಎಲ್.ಇ. ಸಂಸ್ಥೆಯ ಸ್ಥಾಪಕರಲ್ಲಿ ಒಬ್ಬರು. ಸ್ವತಃ ಶಿಕ್ಷಕರಾಗಿದ್ದ ಅವರು ಶಿಕ್ಷಣ ಪ್ರೇಮಿಗಳು. ಬೆಳಗಾವಿಯ ಹರಿಜನ ವಿದ್ಯಾರ್ಥಿಗಳಿಗಾಗಿ ಒಂದು ಬೋರ್ಡಿಂಗನ್ನು ನಡೆಸುತ್ತಿದ್ದರು. ಈ ಅಧಿವೇಶನದ ಸಂದರ್ಭದಲ್ಲಿ ಗಾಂಧೀಜಿಯವರನ್ನು ಭೇಟಿಯಾದ ಅವರು ತಾವೂ ಕೂಡ ರಾಜಕೀಯಕ್ಕೆ ಸೇರಬಯಸುವುದಾಗಿ ಕೇಳಿದರು. ಅದಕ್ಕೆ ಗಾಂಧೀಜಿಯವರು "ಈಗ ನೀವು ಮಾಡುತ್ತಿರುವ ವಿದಾಯಕ ಕಾರ್ಯ ದೇಶಸೇವೆಯೇ ಆಗಿದೆ. ನಿಮ್ಮ ಕೆಲಸವನ್ನು ಮುಂದುವರಿಸಿರಿ ಎಂದು ತಿಳಿಸಿದರು" ಈ ಘಟನೆ ಗಾಂಧೀಜಿಯವರೂ ಹರಿಜನರ ಉದ್ಧಾರವನ್ನು ದೇಶ ಸೇವೆಯ ಒಂದು ಭಾಗವೆಂದು ಪರಿಗಣಿಸಿದ್ದರು ಎಂಬುದಕ್ಕೆ ಸಾಕ್ಷಿಯಾಗಿತ್ತು.

### ಗಾಂಧೀಜಿಯವರ ಕರೆಗೆ ಓಗೊಟ್ಟ ಸ್ವಾಮೀಜಿ

೧೯೨೪ರ ಈ ಅಧಿವೇಶನ ಮುಕ್ತಾಯವಾದರೂ ಅದರ ಪ್ರಭಾವ ಮತ್ತು ಪರಿಣಾಮಗಳು ಅತ್ಯಂತ ದೂರಗಾಮಿಯಾಗಿದ್ದವು. ಬೆಳಗಾವಿ ಕಾಂಗ್ರೆಸ್ಸಿಗರ ಕಾರ್ಯಕ್ಷೇತ್ರ ವಿಸ್ತಾರಗೊಂಡು ಖಾದಿ ಪ್ರಚಾರ ಮತ್ತು ಸ್ವಾತಂತ್ರ್ಯ ಹೋರಾಟಗಳು ಚುರುಕುಗೊಂಡವು. ಬಹುಸಂಖ್ಯಾತರಾಗಿದ್ದ ಲಿಂಗಾಯತರು ಈಗ ಕಾಂಗ್ರೆಸ್ ಜೊತೆಗೆ ಕೈಜೋಡಿಸಿದ್ದರಿಂದ ಕಾಂಗ್ರೆಸ್ಸಿನ ಹೋರಾಟಕ್ಕೆ ಒಂದು ಹೊಸ ಬಲ ಬಂದಂತಾಯಿತು. ಅನೇಕ ಲಿಂಗಾಯತ ಮಠಗಳು ಮಠಾಧೀಶರು ಸ್ವಾತಂತ್ರ್ಯ ಹೋರಾಟಗಾರರಿಗೆ ಆಶ್ರಯದಾತರಾದರು.



೧೯೩೨ರಲ್ಲಿ ಬೈಲಹೊಂಗಲ ತಾಲೂಕಿನ ನಾಗನೂರು ರುದ್ರಾಕ್ಷಿಮಠದ ಪೂಜ್ಯ ಶ್ರೀ ಡಾ. ಶಿವಬಸವ ಮಹಾಸ್ವಾಮಿಗಳು ಬೆಳಗಾವಿಗೆ ಬಂದು ಇಲ್ಲಿ ಒಂದು ವಿದ್ಯಾರ್ಥಿ ಪ್ರಸಾದ ನಿಲಯವನ್ನು ಪ್ರಾರಂಭಿಸಿದರು. ಯಾವುದೇ ಜಾತಿ ಮತ ಪಂಥಗಳ ಭೇದಭಾವವಿಲ್ಲದೆ ಕೇವಲ ಬಡಮಕ್ಕಳಿಗಾಗಿ ನಡೆಸುತ್ತಿರುವ ಈ ಪ್ರಸಾದ ನಿಲಯ ಗಾಂಧಿ ತತ್ವಕ್ಕೆ ಹತ್ತಿರವಾಗಿತ್ತು. ಕಾಂಗ್ರೆಸ್ಸಿಗರ ಮನಸೆಳೆಯಿತು. ಗಂಗಾಧರರಾವ ದೇಶಪಾಂಡೆ ಈಗ ಪೂಜ್ಯರಿಗೆ ತುಂಬ ಹತ್ತಿರದವರಾದರು. ಅವರು ಆಗಾಗ ಬಂದು ಪೂಜ್ಯರ ದರ್ಶನ ಪಡೆದು ಪೂಜ್ಯರೊಂದಿಗೆ ಚರ್ಚೆ ಮಾಡಿ ಹೋಗುತ್ತಿದ್ದರು. ಅದೇ ವರ್ಷ ಅಂದರೆ ೧೯೩೬–೩೭ ರಲ್ಲಿ ಗಂಗಾಧರರಾವ ದೇಶಪಾಂಡೆ ಅವರು ತಮ್ಮ ಗ್ರಾಮ ಹುದಲಿಯಲ್ಲಿ ಜರುಗಿಸಲಿರುವ "ಅಖಿಲ ಭಾರತ ಗಾಂಧಿ ಸೇವಾ ಸಂಘದ ಅಧಿವೇಶನಕ್ಕೆ" ಗಾಂಧೀಜಿಯವರನ್ನು ಬರಮಾಡಿಕೊಂಡರು. ಆ ಸಂದರ್ಭದಲ್ಲಿ ಪೂಜ್ಯಶ್ರೀ ಡಾ. ಶಿವಬಸವ ಮಹಾಸ್ವಾಮಿಗಳಿಗೂ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಗಾಂಧೀಜಿಯವರನ್ನು ಭೇಟಿಯಾಗುವಂತೆ ಆಮಂತ್ರಿಸಿದರು. ಅದಕ್ಕೆ ಸಂತೋಷದಿಂದ ಒಪ್ಪಿಕೊಂಡ ಪೂಜ್ಯರು ಶಹಾಪುರದ ಗೊಂಬಿಮಠದ ಗುರುಶಾಂತ ಸ್ವಾಮಿಗಳನ್ನು ಜೊತೆಗೆ ಕರೆದುಕೊಂಡು ಅಂಕಲಗಿ ಮಠದಲ್ಲಿ ನಿಂತರು. ಅಲ್ಲಿ ಪ್ರತಿದಿನ ಸ್ನಾನ ಪೂಜೆ ಪ್ರಸಾದಗಳನ್ನು ಮುಗಿಸಿಕೊಂಡು ಅಲ್ಲಿಂದ ಹುದಲಿಗೆ ಹೋಗಿ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಬರುತ್ತಿದ್ದರು.

ಗಾಂಧೀಜಿಯವರ ಶಿಸ್ತುಬದ್ಧ ಜೀವನ ಡಾ. ಶಿವಬಸವ ಸ್ವಾಮಿಗಳ ಮೇಲೆ ಬಹಳ ಪ್ರಭಾವ ಬೀರಿತು. ಅವರ ದಿನಚರಿಯನ್ನು ಸಮೀಪದಿಂದ ವೀಕ್ಷಿಸಿದರು. ಗಾಂಧೀಜಿಯವರು ಬೆಳಗಿನ ಐದು ಗಂಟೆಗೆ ಎದ್ದು ಪ್ರಾರ್ಥನೆಯಲ್ಲಿ ಪಾಲ್ಗೊಳ್ಳುತ್ತಿದ್ದರು. ನಂತರ ಶಿಬಿರಾರ್ಥಿಗಳನ್ನು ವೈಯಕ್ತಿಕವಾಗಿ ಸಂದರ್ಶಿಸಿ ಅಧಿವೇಶನದಲ್ಲಿ ತೊಡಗಿಕೊಳ್ಳುತ್ತಿದ್ದರು. ದೇಶದ ಸ್ವಾತಂತ್ರ್ಯ ಹೋರಾಟದಲ್ಲಿ ಪ್ರತಿಯೊಬ್ಬರ ಪಾಲು ಎಷ್ಟು ಅವಶ್ಯ ಎಂಬ ಬಗ್ಗೆ ತಿಳಿಸುತ್ತಿದ್ದರು. ಇದನ್ನೆಲ್ಲ ಡಾ. ಶಿವಬಸವ ಸ್ವಾಮಿಗಳು ಸ್ವತಃ ಆಲಿಸಿದರು. ಕಣ್ಣಾರೆ ಕಂಡರು.

ಅಧಿವೇಶನದ ನಾಲ್ಕನೆಯ ದಿನ ಬೆಳಗಿನ ಪ್ರಾರ್ಥನೆಯ ನಂತರ ಗಂಗಾಧರರಾವ ದೇಶಪಾಂಡೆ ಮತ್ತು ಹುದಲಿಯ ಬಸನಗೌಡರು ಗಾಂಧೀಜಿಯವರಿಗೆ ಶಿವಬಸವ ಸ್ವಾಮಿಗಳ ಪರಿಚಯ ಮಾಡಿಸಿ ಸ್ವಾಮಿಗಳು ಬೆಳಗಾವಿಯಲ್ಲಿ ಜಾತಿ ಭೇದವಿಲ್ಲದೆ ಎಲ್ಲ ಧರ್ಮದ ವಿದ್ಯಾರ್ಥಿಗಳಿಗಾಗಿ ಒಂದು ಪ್ರಸಾದ ನಿಲಯವನ್ನು ನಡೆಸುತ್ತಿರುವ ವಿಚಾರವನ್ನು ತಿಳಿಸಿದರು. ಇದನ್ನು ಕೇಳಿದ ಗಾಂಧೀಜಿಯವರು ಬಹುವಾಗಿ ಸಂತೋಷ ಪಟ್ಟರು. "ಇದೊಂದು ಬಹುದೊಡ್ಡ ಸಮಾಜ ಸೇವೆ, ಪ್ರತಿಯೊಬ್ಬ ಮನುಷ್ಯನ ಮೇಲೆ ಸಮಾಜದ ಋಣ ಇರುತ್ತದೆ. ಸಮಾಜ ಸೇವೆ ಮಾಡುತ್ತಿರುವ ಶಿವಬಸವ ಸ್ವಾಮಿಗಳು ಧನ್ಯರು" ಎಂದು ಹೇಳಿ ಸ್ವಾಮಿಗಳಿಗೆ ಖಾದಿ ಬಟ್ಟೆಯ ಮಹತ್ವವನ್ನು ತಿಳಿಸಿ ಒಂದು ಜೊತೆ ಖಾದಿ ಬಟ್ಟೆಗಳನ್ನು ನೀಡಿ ಇನ್ನು ಮುಂದೆ ಖಾದಿ ಬಟ್ಟೆಯನ್ನೇ ಧರಿಸಲು ತಿಳಿಸಿದರು. ಅಂದಿನಿಂದ ಶಿವಬಸವ ಸ್ವಾಮಿಗಳು ಆ ಖಾದಿ ಬಟ್ಟೆಗೆ ಕಾವಿಯನ್ನು ಬೆರೆಸಿ ತೊಡಲು ಪ್ರಾರಂಭಿಸಿದರು. ಆ ಪರಂಪರೆ ಮೂರು ತಲೆಮಾರುಗಳವರೆಗೆ ಅಂದರೆ ಈಗಿರುವ ಪೂಜ್ಯಶ್ರೀ ಸಿದ್ಧರಾಮ ಮಹಾಸ್ವಾಮಿಗಳವರೆಗೆ ಮುಂದುವರಿದುಕೊಂಡು ಬಂದಿದೆ.

ಹೀಗೆ ಖಾದಿ ಮತ್ತು ಕಾವಿ, ಅಂದರೆ ದೇಶಭಕ್ತಿ ಮತ್ತು ತ್ಯಾಗ ಎರಡನ್ನೂ ಮೈಗೂಡಿಸಿಕೊಂಡ ಶಿವಬಸವ ಸ್ವಾಮಿಗಳು ಬಡವಿದ್ಯಾರ್ಥಿಗಳ ಜೊತೆಗೆ ಸ್ವಾತಂತ್ರ್ಯ ಹೋರಾಟಗಾರರಿಗೂ ಆಶ್ರಯದಾತರಾದರು. ಬೆಳಗಾವಿಯ ಕಾಂಗ್ರೆಸ್ ಕಾರ್ಯಾಲಯಕ್ಕೆ ಬರುವ ನಾಡಿನ ಎಲ್ಲ ಕಾಂಗ್ರೆಸ್ ಮುಖಂಡರು ಬಂದು ಸ್ವಾಮಿಗಳ ದರ್ಶನ ಪಡೆದು ವಿಚಾರ ವಿನಿಮಯ ಮಾಡಿಕೊಂಡು ಹೋಗುತ್ತಿದ್ದರು. ಈ ವೇಳೆಗೆ ಪ್ರಸಾದ ನಿಲಯದ ವಿದ್ಯಾರ್ಥಿಗಳೂ ಕೂಡ ಸ್ವಾತಂತ್ರ್ಯ ಚಳುವಳಿಯಲ್ಲಿ ಧುಮುಕಿ ಬ್ರಿಟಿಷರ ವಿರುದ್ಧ ಘೋಷಣೆ ಕೂಗುವುದು ಪರೇಡ್ ಮಾಡುವುದು ಮುಂತಾದ ಅಹಿಂಸಾತ್ಮಕ ಹೋರಾಟದಲ್ಲಿ ಪಾಲ್ಗೊಳ್ಳುತ್ತಿದ್ದರು.

೧೯೪೨ರಲ್ಲಿ ಚಲೇಜಾವ ಚಳುವಳಿ ಪ್ರಾರಂಭವಾದಾಗ ಮುಂದೆ ಚಳುವಳಿ ಹಿಂಸಾಚಾರಕ್ಕೆ ತಿರುಗಿ ಅನೇಕ ನಾಯಕರು ಭೂಗತರಾದರು. ಅವರಲ್ಲಿ ಸಂಪಗಾವಿಯ ಶ್ರೀ ಚನ್ನಪ್ಪ ವಾಲಿ ಮುರುಗೋಡ ಹೊಸೂರದ ವೀರಪ್ಪ ಸುತಗಟ್ಟಿ, ತಲ್ಲೂರಿನ ರಾಯನಗೌಡ ಪಾಟೀಲ ಸಂಕೇಶ್ವರದ ಅಪ್ಪಣ್ಣಗೌಡ ಪಾಟೀಲ ಇವರನ್ನು ಹಿಡಿದು ಕೊಟ್ಟವರಿಗೆ ಬಹುಮಾನ ಕೊಡುವುದಾಗಿ ಬ್ರಿಟಿಷ್ ಸರಕಾರ ಘೋಷಿಸಿತು. ಅಂತಹ ಸಂದರ್ಭದಲ್ಲಿ ಅವರಿಗೆ ಅನ್ನ ಆಶ್ರಯವನ್ನಿತ್ತು ಪೂಜ್ಯಶ್ರೀ ಶಿವಬಸವ ಸ್ವಾಮಿಗಳು ಅವರನ್ನು ರಕ್ಷಿಸಿದರು. ಹೀಗೆ ವಿದ್ಯಾರ್ಥಿ ಪ್ರಸಾದ ನಿಲಯವು ಸ್ವಾತಂತ್ರ್ಯ ಹೋರಾಟಗಾರರಿಗೆ ಆಶ್ರಯ ತಾಣವಾಯಿತು. ಈ ಸುಳಿವು ಬ್ರಿಟಿಷ ಸರಕಾರಕ್ಕೆ ತಿಳಿದು ಈಗ ಸ್ವಾಮಿಗಳನ್ನೇ ಬಂಧಿಸಲು ಮುಂದಾಯಿತು. ಸರ್ಕಾರದ ಈ ನಿರ್ಧಾರವನ್ನು ಮುಂಚಿತವಾಗಿ ತಿಳಿದುಕೊಂಡ ಬೆಳಗಾವಿಯ ಜಿಗಜಿನ್ನಿ ವಕೀಲರು ತಕ್ಷಣ ಸ್ವಾಮಿಗಳಿಗೆ ಭೂಗತರಾಗಲು ಕೇಳಿಕೊಂಡರು ಆಗ ಸ್ವಾಮಿಗಳು ಗುಪ್ತವೇಷ ಧರಿಸಿ ಘಟಪ್ರಭಾದ ಮಾರ್ಗವಾಗಿ ಒಂದು ಗೂಡ್ಸ್ ರೈಲಿನಲ್ಲಿ ಪ್ರಯಾಣ ಬೆಳೆಸಿ ಕೆಳದಿ ಹಿರೇಮಠಕ್ಕೆ ಹೋಗಿ ಅಲ್ಲಿಯ ಮಠದಲ್ಲಿ ನೆಲೆನಿಂತರು. ಮುಂದೆ ಚಳುವಳಿಗಾರರನ್ನು ಸರಕಾರ ಬಿಡುಗಡೆ ಮಾಡಿದ ಮೇಲೆ ಪುನಃ ಸ್ವಾಮಿಗಳು ಬೆಳಗಾವಿಗೆ ಬಂದರು.

ಹೀಗೆ ಗಾಂಧೀಜಿಯವರ ಪ್ರಭಾವದಿಂದ ಡಾ. ಶಿವಬಸವ ಸ್ವಾಮಿಗಳು ರಾಷ್ಟ್ರಧರ್ಮವನ್ನು ಪಾಲಿಸಿ ಸ್ವಾತಂತ್ರ್ಯ ಹೋರಾಟ ಮತ್ತು ಚಳುವಳಿಗಾರರನ್ನು ಬೆಂಬಲಿಸಿ ರಾಷ್ಟ್ರ ನಿರ್ಮಾಣ ಕಾರ್ಯದಲ್ಲಿ ಭಾಗಿಗಳಾದರು.

### ಪ್ರತ್ಯಕ್ಷದರ್ಶಿಯ ಅಭಿಪ್ರಾಯ

ಶ್ರೀ ಶಂಕರ ಕುರ್ತಕೋಟಿ ಅವರು ಸುಮಾರು ೫೦ ವರ್ಷಗಳ ಕಾಲ ಕಾಂಗ್ರೆಸ್ ಕಾರ್ಯಕರ್ತರಾಗಿ ದುಡಿದವರು ಬೆಳಗಾವಿ ಅಧಿವೇಶನದ ಕಾಲಕ್ಕೆ ಅವರು ಇನ್ನೂ ಚಿಕ್ಕವರಾಗಿದ್ದರು. ಅಧಿವೇಶನವನ್ನು ತೀರ ಹತ್ತಿರದಿಂದ ವೀಕ್ಷಿಸಿದ ಅವರು

"ಅಲ್ಲಿ ಸೇರಿದ್ದ ಜನಜಂಗುಳಿ ಸ್ವಯಂ ಸೇವಕರ ಕವಾಯತ್ತು ನಾಯಕರ ಚಲನವಲನ ಹರ್ಡೀಕರ ಅವರು ಕುದುರೆ ಏರಿ ಸುತ್ತಲೂ ಸುತ್ತುವ ರೀತಿ ನಾಯಕರ ಭಾಷಣ ಇವುಗಳನ್ನೆಲ್ಲ ನೋಡಿದ ನನಗೆ ನಾನೂ ರಾಷ್ಟ್ರಕ್ಕಾಗಿ ಏನಾದರೂ ಮಾಡಬೇಕು ಎನಿಸುತ್ತಿತ್ತು" ಎಂದು ಅಭಿಪ್ರಾಯಪಟ್ಟಿದ್ದಾರೆ. ಬಹುಶಃ

ಈ ಪ್ರೇರಣೆಯೆ ಅವರು ೫೦ ವರ್ಷ ಕಾಲ ಕಾಂಗ್ರೆಸ್ ಕಾರ್ಯಕರ್ತರಾಗಿ ದುಡಿಯಲು ಸಹಾಯವಾಯಿತು.

ಹೀಗೆ ಬೆಳಗಾವಿಯ ಕಾಂಗ್ರೆಸ್ ಅಧಿವೇಶನವು ಹತ್ತು ಹಲವು ದೃಷ್ಟಿಯಿಂದ ಮರೆಯಲಾಗದ ಒಂದು ಅವಿಸ್ಮರಣೀಯ ಐತಿಹಾಸಿಕ ದಾಖಲೆಯಾಗಿದೆ.

## ಭಾರತ ಬಿಟ್ಟು ತೊಲಗಿ ಆಂದೋಲನ

೧೯೪೨ ಆಗಸ್ಟ್ ೮ ರಂದು ಗಾಂಧೀಜಿಯವರ ಬಂಧನವಾಯಿತು. ಬ್ರಿಟಿಷ ಸರಕಾರ, ಪ್ರಮುಖ ಕಾಂಗ್ರೆಸ್ ನಾಯಕರನ್ನು ಜೈಲಿಗೆ ಕಳುಹಿಸಿತು. ಗಾಂಧೀಜಿಯವರು ತಮ್ಮ ಭಾಷಣದಲ್ಲಿ ಬ್ರಿಟಿಷರಿಗೆ 'ಭಾರತ ಬಿಟ್ಟು ತೊಲಗಿ' ಎಂದು ಜೋರಾಗಿ ಹೇಳಿ, ಹಿಂದಿನ ಚಳುವಳಿಗಳಿಗಿಂತ ಈ ಚಳುವಳಿ ತೀರಭಿನ್ನವಾಗಿರಬೇಕು ಎಂದು ಗಾಂಧೀಜಿ ಪದೆ ಪದೆ ಹೇಳಿದ್ದರು. ಗಾಂಧೀಜಿಯವರ ಬಂಧನವಾದ ಕೂಡಲೆ ಕಾಂಗ್ರೆಸ್ಸಿನ ಮುಂದಿನ ಕಾರ್ಯಕ್ರಮವೇನು ಹಾಗು ಹಿಂದಿನ ಚಳುವಳಿಗಳೆಲ್ಲದ್ದಕ್ಕಿಂತ ಈ ಬಾರಿಯ ಚಳವಳಿ ಭಿನ್ನಸ್ವರೂಪದ್ದಾಗಿರಬೇಕು ಎಂದರೆ ಹೇಗಿರಬೇಕು? ಕಾರ್ಯಕರ್ತರಲ್ಲಿ ಈ ಬಗ್ಗೆ ಶಂಕೆ ಉಳಿದದ್ದು ಸುಳ್ಳಲ್ಲ. 'ಕರ್ನಾಟಕದಲ್ಲಿ ಕ್ವಿಟ್ ಇಂಡಿಯಾ ಚಳವಳಿ' ಎನ್ನುವ ಪುಸ್ತಕದಲ್ಲಿ ಡಾ. ಸೂರ್ಯನಾಥ ಕಾಮತರು, ರಂಗನಾಥ ದಿವಾಕರರ ಮಾತುಗಳನ್ನು ಉಲ್ಲೇಖಿಸುತ್ತಾರೆ. 'ಗಾಂಧೀಜಿಯ ಭಾಷಣದ ಕೆಲವೊಂದು ಭಾಗಗಳನ್ನು ಪತ್ರಿಕೆಗಳು ವರದಿ ಮಾಡಿದ್ದವಾದರೂ ಕೈಕೊಳ್ಳಬೇಕಾದ ಕಾರ್ಯಕ್ರಮದ ಸ್ವರೂಪದ ಬಗ್ಗೆ ಪತ್ರಿಕೆಗಳು ಏನನ್ನೂ ಬರೆದಿರಲಿಲ್ಲ. ಗಾಂಧೀಜಿಗೆ ಪ್ರಿಯರೂ ನಿಕಟರೂ ಆದ ವ್ಯಕ್ತಿಗಳಲ್ಲೂ ಕಾರ್ಯಕ್ರಮದ ಸ್ವರೂಪದ ಬಗ್ಗೆ ಗೊಂದಲವೇ ಇದ್ದಂತಿತ್ತು.'

ಆದರೆ ಜನರ ಪ್ರತಿಭಟನೆ, ಕ್ರೋಧ ಮತ್ತು ಉತ್ಸಾಹಗಳು ಪ್ರವಾಹದ ರೂಪ ಪಡೆದವು. ಯಾವುದೇ ನಾಯಕರ ಮಾರ್ಗದರ್ಶನಕ್ಕಾಗಿ ಯಾರೂ ಕಾಯುತ್ತ ನಿಲ್ಲುವುದು ಸಾಧ್ಯವಿರಲಿಲ್ಲ. ಕೆಲವು ಸ್ಥಳಗಳಲ್ಲಿ ಆಗಸ್ಟ್ ೯ ರಂದೇ ಹರತಾಳ ಹಾಗು ಮೆರವಣಿಗೆಗಳನ್ನು ಸಂಘಟಿಸಲಾಗಿತ್ತು. ಮುಂಬಯಿ, ಅಹಮದಾಬಾದ, ದೆಹಲಿ, ಹಾಗು ಪುಣೆಗಳಲ್ಲಿ ಗೋಳಿಬಾರ ನಡೆಯಿತು. ಆ ಸಾವು ನೋವುಗಳು ಜನರನ್ನು ಕೆರಳಿಸಿತು. ಬೆಳಗಾವಿಯಲ್ಲಿ ಜನರನ್ನು ಚದುರಿಸಲು



ಲಾಟಿಚಾರ್ಜು ಮಾಡಲಾಯಿತು. ಈ ಚಳವಳಿಗೆ ಒಂದು ಸ್ಪಷ್ಟತೆ ನೀಡಲು, ಈ ಚಳುವಳಿಯು ಹಿಂಸಾತ್ಮಕ ದಾರಿ ಹಿಡಿಯುವುದನ್ನು ತಡೆಯಲು ಗಾಂಧೀಜಿಯವರ ಕೆಲವು ಅನುಯಾಯಿಗಳು ಹದಿನೈದು ಅಂಶಗಳ ಒಂದು ಕಾರ್ಯಸೂಚಿ ತಯಾರಿಸಿದರು.

ಅದರಲ್ಲಿಯ ಕೆಲವನ್ನು ಇಲ್ಲಿ ಹೀಗೆ ಗುರುತಿಸಬಹುದು. ಶಾಲಾ ಕಾಲೇಜುಗಳ ಬಹಿಷ್ಕಾರ, ವಕೀಲರಿಂದ ನ್ಯಾಯಾಲಯಗಳ ಬಹಿಷ್ಕಾರ, ಕಾರ್ಮಿಕರಿಂದ ಮುಷ್ಕರ, ಸರಕಾರಿ ನೌಕರಿಗಳಿಗೆ ರಾಜೀನಾಮೆ ನೀಡುವಿಕೆ, ಮದ್ಯ ಮಾರಾಟದ ಅಂಗಡಿಗಳ ಮುಂದೆ ಪಿಕೆಟಿಂಗ್, ಟೆಲಿಗ್ರಾಫ್ ಮತ್ತು ದೂರವಾಣಿ ತಂತಿಗಳ ಕಡಿಯುವಿಕೆ, ಸರಕಾರದ ಆಜ್ಞೆಗಳನ್ನು ಮುರಿಯುವುದು, ರೈಲುಗಳಲ್ಲಿ ಟಿಕೆಟ್ ಇಲ್ಲದೆ ಪ್ರಯಾಣ, ಈ ಎಲ್ಲ ಸಂಗತಿಗಳು ಈ ಹದಿನೈದು ಅಂಶಗಳ ಕಾರ್ಯಕ್ರಮದಲ್ಲಿ ಸೇರಿದ್ದವು.

ಕ್ವಿಟ್ ಇಂಡಿಯಾ ಚಳುವಳಿಯ ಬಗ್ಗೆ ಪ್ರಸಿದ್ಧ ಪುಸ್ತಕ ಬರೆದ ಅಮೆರಿಕನ್ ಲೇಖಕ ಹಚಿನ್ಸ 'ಕರ್ನಾಟಕ ಪ್ಯಾಟರ್ನ್' ಕುರಿತು ಹೀಗೆ ಬರೆಯುತ್ತಾರೆ. 'ಕೆಲವೊಮ್ಮೆ ಹಲವು ನೂರು ಜನರನ್ನು ಒಳಗೊಂಡ ತಂಡಗಳು ಎಚ್ಚರಿಕೆಯಿಂದ, ಸಂಯೋಜಿಸಿದಂತೆ ಒಮ್ಮೆಗೆ ಸಿಡಿಲಿನಂತೆ ಹಲ್ಲೆ ಮಾಡುವುದು ಹಾಗು ತಕ್ಷಣ ಪೋಲಿಸರು ಬರುವಷ್ಟರಲ್ಲಿ ಇದೇ ಜನ ನಿಷ್ಕಪಟ ಭಾವದಿಂದ ಹೊಲದಲ್ಲಿ ಯಾರಿಗೂ ಗೊತ್ತಿಲ್ಲದಂತೆ ಕಾರ್ಯನಿರ್ವಹಿಸುವುದು'

ಈ ಬಗೆಯ ಹೋರಾಟ ಪೋಲಿಸರಿಗೆ ದಿಗಿಲು ತರಿಸುತ್ತಿತ್ತು. ಬೆಳಗಾವಿ ಜಿಲ್ಲೆಯ ಹೋರಾಟಗಾರರು ಈ ಬಗೆಯ ಯುದ್ಧದ ಪ್ರಾವಿಣ್ಯತೆಯನ್ನು ಮೈಗೂಡಿಸಿಕೊಂಡಿದ್ದರು. ರೈಲ್ವೆಯ ಫೋನಿನ ತಂತಿಗಳನ್ನು ಕತ್ತರಿಸಿ, ಹೊಲದಲ್ಲಿ ಕೆಲಸ ಮಾಡುತ್ತಿದ್ದ ಹುಡುಗರನ್ನು ನೋಡಿ ಪೋಲಿಸರಿಗೆ ಅಚ್ಚರಿಯಾಯಿತು. ಅವರಿಗೆ ಸಂಶಯ ಬಂದರೂ ಅವರಿಗೆ ಬಂಧಿಸಲು ಪುರಾವೆ ಸಿಗುತ್ತಿರಲಿಲ್ಲ.

ಶಿವಾಜಿಯ ಗೆರಿಲ್ಲಾ ತಂಡಗಳಂತೆ ಗುಡ್ಡಗಳಲ್ಲಿ ಅಡಗಿ ವೈರಿಗಳ ಮೇಲೆ ಹಲ್ಲೆ ಮಾಡುವುದು ಇವರ ತಂತ್ರವಾಗಿರುತ್ತಿತ್ತು. ಅಲ್ಪಕಾಲದಲ್ಲಿಯೇ ಸಾಧ್ಯವಿದ್ದಷ್ಟು ಹಾನಿ ಮಾಡುವುದೇ ಅವರ ಉದ್ದೇಶವಾಗಿರುತ್ತಿತ್ತು. ಪೂರ್ತಿನಾಶಗೊಳಿಸುವುದಕ್ಕಿಂತ ಅಸ್ತವ್ಯಸ್ತಗೊಳಿಸಿ ಅವ್ಯವಸ್ಥೆಯುಂಟು ಮಾಡುವುದು ಅವರ

ಗುರಿಯಾಗಿರುತ್ತಿತ್ತು. ಕೆಲಸವನ್ನು ತಡೆದು ನಿಲ್ಲಿಸುವುದಕ್ಕಿಂತ, ಕೆಲಸಕ್ಕೆ ಅಸಹಕಾರ ಉಂಟು ಮಾಡುವುದು, ತುಂಬಾ ಪರಿಣಾಮಕಾರಿಯಾಗಿರುತ್ತಿತ್ತು. ರೈಲಿನ ಫೋನು ತಂತಿಗಳನ್ನು ಕಿತ್ತು, ರೈಲು ಹೋಗಲು ಅಡಚಣಿ ಉಂಟು ಮಾಡುವುದಷ್ಟೇ ಅವರ ಗುರಿಯಾಗಿರುತ್ತಿತ್ತೇ ಹೊರತು ರೈಲು ಹಳಿಗಳನ್ನು ಕಿತ್ತು ರೈಲನ್ನು ಕೆಡವಿ ಸಾವು ನೋವು ಉಂಟು ಮಾಡುವುದು ಅವರ ಬಯಕೆಯಾಗಿರಲಿಲ್ಲ. ಇದನ್ನು ನಿಯೋಜಿತ ಸಾಮೂಹಿಕ ಅಸಹಕಾರ ಆಂದೋಲನ ಎಂದು ಕರೆಯಬಹುದು.

## ಗ್ರಾಮ ಸ್ವರಾಜ್ಯ ಕಲ್ಪನೆ

೧೮೮೫ರಲ್ಲಿ ಅಸ್ತಿತ್ವಕ್ಕೆ ಬಂದಿದ್ದ ರಾಷ್ಟ್ರೀಯ ಕಾಂಗ್ರೆಸ್ ಆಗಾಗ ಸಭೆ, ಅಧಿವೇಶನಗಳನ್ನು ಹಮ್ಮಿಕೊಂಡು ಇಂಗ್ಲಿಷ್‌ರಿಂದ ಭಾರತವನ್ನು ಬಿಡುಗಡೆ ಮಾಡುವುದಕ್ಕಾಗಿ ಕೈಕೊಳ್ಳಬೇಕಾದ ಕ್ರಮಗಳ ಬಗೆಗೆ ಚರ್ಚೆ ಮಾಡುತ್ತಿತ್ತು. ಇದರಿಂದ ಜನರಲ್ಲಿ ಮಾತೃಭೂಮಿಯ ಬಗ್ಗೆ ಭಕ್ತಿ, ಅಭಿಮಾನ ಮೂಡುತ್ತಿರುವುದನ್ನು ಗಮನಿಸಿದ ಲಾರ್ಡ್ ಕರ್ಜನ್‌ನು ಬಂಗಾಲ ವಿಭಜನೆಯ ಪ್ರಸ್ತಾಪವನ್ನು ಇಂಗ್ಲಂಡ್ ಸರಕಾರಕ್ಕೆ ಕಳುಹಿಸಿಕೊಟ್ಟನು. ೧೯೦೫ನೆಯ ಅಕ್ಟೋಬರ್ ೧೬ರಂದು ಸರಕಾರ ಅದನ್ನು ಅನುಮೋದಿಸಿತು. ಇದರಿಂದ ಭಾರತೀಯರಲ್ಲಿ ಬ್ರಿಟಿಷ ಸರಕಾರದ ಬಗ್ಗೆ ಅಸಂತೋಷದ ಅಲೆ ದೊಡ್ಡ ಪ್ರಮಾಣದಲ್ಲಿ ಎದ್ದಿತು. ದೇಶಭಕ್ತರಲ್ಲಿ ಎರಡು ಬಣಗಳಾದವು. ಒಂದು ಮುಳ್ಳನ್ನು ಮುಳ್ಳಿನಿಂದಲೇ ತೆಗೆಯಬೇಕು ಎಂಬ ತೀವ್ರವಾದಿಗಳ ಬಣ, ಅದಕ್ಕೆ ಬಾಲಗಂಗಾಧರ ತಿಲಕರು ನಾಯಕರು. ಮತ್ತೊಂದು ಐಕ್ಯಭಾವದಿಂದ ವಿಧಾಯಕವಾಗಿ ಹೋರಾಡಿ ಸ್ವಾತಂತ್ರ್ಯ ಸಾಧಿಸಬೇಕೆಂಬ ಸೌಮ್ಯವಾದಿ ಬಣ ಇದಕ್ಕೆ ದಾದಾಭಾಯಿ ನವರೋಜಿ, ಗೋಪಾಲಕೃಷ್ಣ ಗೋಖಲೆ ನಾಯಕರು.

ಎರಡೂ ಬಣಗಳು ಸ್ವಾತಂತ್ರ್ಯದ ಸಲುವಾಗಿ ವಿಭಿನ್ನ ರೀತಿಯಲ್ಲಿ ಆಂದೋಲನವನ್ನು ಸಂಘಟಿಸುತ್ತಿರುವ ಕಾಲದಲ್ಲಿಯೇ ಆ ಕಣಕ್ಕೆ ಮಹಾತ್ಮಾ ಗಾಂಧೀಜಿಯವರ ಪ್ರವೇಶವಾಯಿತು. ಬ್ರಿಟಿಷರು ರೂಪಿಸಿದ್ದ ಕರಾಳ ಶಾಸನ 'ರೌಲೆಕ್ಟ ಆ್ಯಕ್ಟ'ನ್ನು ಪ್ರತಿಭಟಿಸಿ ಮಹಾತ್ಮಾ ಗಾಂಧೀಯವರು ಜನರಿಗೆ ಸತ್ಯಾಗ್ರಹ ಮಾರ್ಗವನ್ನು ಬೋಧಿಸಿದರು. '೧೯೧೯ನೆಯ ಏಪ್ರಿಲ್ ೬ ರಂದು ದೇಶದ ಜನ ಸತ್ಯಾಗ್ರಹದಲ್ಲಿ ಪಾಲ್ಗೊಳ್ಳಬೇಕು. ಅಂದು ಆಹಾರ ಸೇವಿಸದೆ, ಯಾವ ಉದ್ಯೋಗವನ್ನು ಮಾಡದೆ, ದೇವರನ್ನು ಸ್ತುತಿಸಬೇಕು ಮತ್ತು 'ರೌಲೆಕ್ಟ ಆ್ಯಕ್ಟ'ನ್ನು ತೆಗೆದು ಹಾಕಲು ಸರಕಾರಕ್ಕೆ ಪ್ರಾರ್ಥಿಸಬೇಕು' ಎಂದು ಗಾಂಧೀಜಿ ಕರೆ ಕೊಟ್ಟರು. ಅದೇನು ಮಾಯೆಯೋ ಗಾಂಧೀಜಿಯವರ ಮಾತು ದೇಶದ ಲಕ್ಷಾಂತರ ಜನರನ್ನು ಸೆಳೆಯಿತು. ಅವರ ಸತ್ಯಾಗ್ರಹದ ಅಸ್ತ್ರಕ್ಕೆ ದೊಡ್ಡ ಬಲ ಬಂದಿತು. ಗಾಂಧೀಜಿಯವರ ನೇತೃತ್ವದಲ್ಲಿ ಸ್ವಾತಂತ್ರ್ಯ ಆಂದೋಲನಕ್ಕೆ ಹೊಸ ತಿರುವು ಸಿಕ್ಕಿತು.

ಸ್ವಾತಂತ್ರ್ಯದ ಬಗೆಗಿನ ಮಹಾತ್ಮಾಜಿಯವರ ಚಿಂತನೆಗಳು ದೇಶದ ಜನರ ಮೇಲೆ ಗಾಢ ಪ್ರಭಾವ ಬೀರತೊಡಗಿದವು. ಭಾರತ, ದಕ್ಷಿಣ ಆಫ್ರಿಕೆಯಂತಹ ವಸಾಹತುಶಾಹಿ ಆಡಳಿತಕ್ಕೆ ಒಳಪಟ್ಟ ದೇಶಗಳು ಎದುರಿಸುತ್ತಿರುವ ಸಮಸ್ಯೆಗಳಿಗೆ ಬ್ರಿಟಿಷರ ಆಡಳಿತವೇ ಕಾರಣವಲ್ಲ. ಅಲ್ಲಿಯ ಜನರು ಪಾಶ್ಚಾತ್ಯರ ಅನುಕರಣೆಯಲ್ಲಿ ತೊಡಗಿರುವುದೇ ಮುಖ್ಯ ಕಾರಣವೆಂಬುದು ಅವರ ಅಭಿಪ್ರಾಯವಾಗಿತ್ತು. ಅವರ ಪ್ರಕಾರ: ಇಂಗ್ಲಿಷ್‌ರು ಭಾರತವನ್ನು ವಶಪಡಿಸಿಕೊಳ್ಳಲಿಲ್ಲ. ನಾವೇ ಅವರಿಗೆ ಒಪ್ಪಿಸಿದೆವು. ಇಂಗ್ಲಿಷ್‌ರಿಗೆ ವ್ಯಾಪಾರ ಮುಖ್ಯ ಲಾಭಗಳಿಕೆ ಮುಖ್ಯವಾಗಿತ್ತು. ಅವರನ್ನು ನೋಡಿ ನಾವೂ ಧಿಡೀರನೆ ಶ್ರೀಮಂತರಾಗಬೇಕೆಂಬ ಆಶೆಯಿಂದ ನಾವೇ ಅವರಿಗೆ ನೆರವಾದೆವು, ಪ್ರೋತ್ಸಾಹಿಸಿದೆವು. ಆಗ ಅವರು ಇಲ್ಲಿ ಕಾಲೂರಿ ನಿಂತರು. ಇಲ್ಲಿಯ ರಾಜರ ಒಳಜಗಳಗಳು ಅವರ ಅಧಿಕಾರ ಸ್ಥಾಪನೆಗೆ ಸಹಾಯ ಮಾಡಿದವು. ಹಾಗೆ ನೋಡಿದರೆ ಆಧುನಿಕ ನಾಗರಿಕತೆಯೇ ನಮ್ಮ ಮೊದಲ ವೈರಿ. ಇದು ಸಾಮ್ರಾಜ್ಯಶಾಹಿಗಿಂತ, ವಸಾಹತುಶಾಹಿಗಿಂತ ಹೆಚ್ಚು ಕೆಟ್ಟದ್ದು. ಕ್ರೂರವಾದದ್ದು. ಹೆಚ್ಚು ದುಷ್ಪರಿಣಾಮ ಬೀರುವಂತಹದ್ದು. ಆಧುನಿಕ ನಾಗರಿಕತೆ ಅಂದರೆ ಪಾಶ್ಚಾತ್ಯರ ನಾಗರಿಕತೆ. ಯಂತ್ರ ಕಾರ್ಖಾನೆಗಳು ಅದರ ಮುಖ್ಯ ಲಕ್ಷಣಗಳು. ಅದಕ್ಕೆ ಬಾರತೀಯರು ಮಾತ್ರ ಬಲಿಪಶು ಆಗುತ್ತಿಲ್ಲ ಇಂಗ್ಲಿಷರೂ ಆಗುತ್ತಿದ್ದಾರೆ.' ಭಾರತೀಯರ ಪಾರತಂತ್ರ್ಯಕ್ಕೆ ಬ್ರಿಟಿಷರೇ ಕಾರಣ ಎಂದು ಬಹುಜನರು ಹೇಳುತ್ತಿದ್ದ ಕಾಲದಲ್ಲಿ ಗಾಂಧೀಜಿಯವರು ಅದನ್ನು ಬೇರೆ ರೀತಿಯಿಂದಲೇ ವ್ಯಾಖ್ಯಾನಿಸಿದರು. ಯಂತ್ರನಾಗರಿಕತೆಯ ಮೋಹ ಜಾಲದಲ್ಲಿ ಸಿಲುಕಿರುವ ಭಾರತೀಯರನ್ನು, ಅದರಿಂದ ಬಿಡುಗಡೆಗೊಳಿಸುವುದೇ ಸ್ವಾತಂತ್ರ್ಯ ಹೋರಾಟದ ಮೊದಲ ಮೆಟ್ಟಿಲು ಎಂದು ಭಾವಿಸಿದರು.

ಗಾಂಧೀಜಿಯವರು ಸತ್ಯಾಗ್ರಹಕ್ಕೂ ಗ್ರಾಮಸ್ವರಾಜ್ಯಕ್ಕೂ ನೇರ ಸಂಬಂಧ ಕಲ್ಪಿಸಿದರು. ಗ್ರಾಮಸ್ವರಾಜ್ಯಕ್ಕೆ ಎಲ್ಲಿಲ್ಲದ ಮಹತ್ವ ಕೊಟ್ಟರು. ಆಧುನಿಕ ನಗರ ಸಂಸ್ಕೃತಿಯು ಪಾಶ್ಚಾತ್ಯ ಸಂಸ್ಕೃತಿಯ ತಳಹದಿಯೆಂಬುದು ಅವರ ಸ್ಪಷ್ಟವಾದ ನಿಲುವು ಆಗಿತ್ತು. ನಗರ ಸಂಸ್ಕೃತಿಯ ಕಡೆಗೆ ಹೋಗುವುದು ಎಂದರೆ ಪರಂಪರೆಯಿಂದ ಗಳಿಸಿಕೊಂಡು ಬಂದಿರುವ ಭಾರತೀಯ ಸಾಂಸ್ಕೃತಿಕ ಸಾಮಾಜಿಕ ಮೌಲ್ಯಗಳಿಗೆ ತಿಲಾಂಜಲಿ ಕೊಟ್ಟಂತೆ ಎಂದು ಗಾಂಧೀಜಿ ಗ್ರಾಮಸ್ವರಾಜ್ಯದ ಮಹತ್ವವನ್ನು ಮನವರಿಕೆ ಮಾಡಿಕೊಟ್ಟರು.

**ಚಲೇಜಾವ ಚಳುವಳಿ**

ಸ್ವಾತಂತ್ರ್ಯ ಹೋರಾಟಕ್ಕೂ ಬೆಳಗಾವಿಗೂ ಅವಿನಾಭಾವ ಸಂಬಂಧವಿದೆ. ೧೯೦೫ರ ವಂಗಭಂಗ ಚಳುವಳಿಯ ಕಾಲದಿಂದ ೧೯೪೨ರ ಚಲೇಜಾವ್ ಚಳುವಳಿಯವರೆಗಿನ ಎಲ್ಲ ಸ್ವಾತಂತ್ರ್ಯ ಹೋರಾಟಗಳಲ್ಲಿ ಈ ಜಿಲ್ಲೆ ಅಗ್ರಗಣ್ಯವಾಗಿ ಕೆಲಸ ಮಾಡಿದೆ. ಆರಂಭದಲ್ಲಿ ಲೋಕಮಾನ್ಯ ತಿಲಕರೆಡೆಗೆ ಆಕರ್ಷಿತರಾಗಿದ್ದ ಇಲ್ಲಿಯ ದೇಶಭಕ್ತರು, ಅವರ ನಿಧನಾನಂತರ ಗಾಂಧೀಜಿ ತತ್ವದೆಡೆಗೆ ಮುಖ ಮಾಡಿದರು. ಗಾಂಧೀಜಿಯವರ ಕರೆಯಂತೆ ಅನೇಕರು ಶಾಲಾ ಕಾಲೇಜುಗಳನ್ನು ಬಹಿಷ್ಕರಿಸಿದರು. ಹಲವರು ಸರ್ಕಾರಿ ನೌಕರಿಗಳಿಗೆ ರಾಜೀನಾಮೆ ಬಿಸಾಕಿ ಸ್ವಾತಂತ್ರ್ಯ ಆಂದೋಲನದಲ್ಲಿ ಧುಮುಕಿದರು.

೧೯೨೧ ರಲ್ಲಿ ಬೆಳಗಾವಿಯಲ್ಲಿ ರಾಷ್ಟ್ರೀಯ ಶಾಲೆಯನ್ನು ಆರಂಭಿಸಲಾಯಿತು. ನಂದಗಡ, ಪಾಶ್ಚಾಪುರ, ಯಮಕನಮರಡಿ, ಹುದಲಿ ಈ ಮುಂತಾದ ಊರುಗಳಲ್ಲಿಯೂ ರಾಷ್ಟ್ರೀಯ ಶಾಲೆಗಳು ಆರಂಭಗೊಂಡವು. ಸರ್ಕಾರಿ ಶಾಲೆಗಳನ್ನು ಬಹಿಷ್ಕರಿಸಿದ್ದ ವಿದ್ಯಾರ್ಥಿಗಳಿಗೆ ಇಲ್ಲಿ ಶಿಕ್ಷಣ ನೀಡಲಾಗುತ್ತಿತ್ತು. ಪುಂಡಲೀಕಜಿ ಕಾತಗಡೆ, ದಾದಾ ನರವಣಿ, ಬಾಳಕೃಷ್ಣ ಪಟವರ್ಧನ, ರಾಂಭಾವು ಕಾಗವಾಡೆ, ದಾದಾ ಕಾಳೆ, ಜಾಯದೆ, ಗೋವಿಂದರಾವ ಯಕ್ಕುಂಡಿ, ಸದು ಗುರೂಜಿ, ಬೆಟಗೇರಿ ಕೃಷ್ಣಶರ್ಮ, ಅನಂತರಾವ ಚಿಕ್ಕೋಡಿ, ರಾಮಚಂದ್ರ ವಡವಿ, ಗೋಪಾಳರಾವ ಯಕ್ಕುಂಡಿ, ತಿಮ್ಮಪ್ಪ ನಾಯಕ, ಗಂಗಪ್ಪ ಯಮಕನಮರಡಿ ಮುಂತಾದವರು ಈ ರಾಷ್ಟ್ರೀಯ ಶಾಲೆಯಲ್ಲಿ ಶಿಕ್ಷಕರಾಗಿ ಕೆಲಸ ಮಾಡಿದರು. ಗಂಗಾಧರರಾವ ದೇಶಪಾಂಡೆಯವರು ಕುಮರಿ ತೋಟದಲ್ಲಿ ಆಶ್ರಮವೊಂದನ್ನು ಸ್ಥಾಪಿಸಿ ರಚನಾತ್ಮಕ ಕೆಲಸಗಾರರಿಗೆ ಹಾಗೂ ಸ್ವಾತಂತ್ರ್ಯ ಯೋಧರಿಗೆ ತರಬೇತಿ ಕೊಡುವ ಕಾರ್ಯ ಕೈಕೊಂಡರು.



ಉಪ್ಪಿನ ಸತ್ಯಾಗ್ರಹ, ಅರಣ್ಯ ಸತ್ಯಾಗ್ರಹ, ಈಚಲಮರ ಕಡಿಯುವುದು ಹೀಗೆ ಗಾಂಧೀಜಿಯವರು ಕರೆ ನೀಡಿದ ಎಲ್ಲ ಸತ್ಯಾಗ್ರಹಗಳಿಗೆ ಬೆಳಗಾವಿ ಜಿಲ್ಲೆ ಓಗೊಟ್ಟಿತು. ಈ ಸತ್ಯಾಗ್ರಹಿಗಳನ್ನು ಹಿಂಡಲಗಾ ಜೇಲಿಗೆ ದಬ್ಬಲಾಯಿತು. ಉಳಿದವರನ್ನು ಯರವಡಾ ಮತ್ತು ನಾಸಿಕ್ ಜೇಲಿಗೆ ಕಳಿಸಿಕೊಡಲಾಯಿತು. ಆಗಿನ ಮುಂಬೈ ಪ್ರಾಂತದ ಕರ್ನಾಟಕ ವಿಭಾಗದಿಂದ ಸೆರೆಮನೆ ಕಂಡ ಸತ್ಯಾಗ್ರಹಿಗಳಲ್ಲಿ ಅರ್ಧದಷ್ಟು ಅಂದರೆ ೭೫೦ ಸತ್ಯಾಗ್ರಹಿಗಳು ಬೆಳಗಾವಿ ಜಿಲ್ಲೆಯವರೇ ಆಗಿದ್ದರೆಂದು ಹೇಳಿದರೆ ಈ ಜನರ ದೇಶಪ್ರೇಮದ ಪರಿ ಗೊತ್ತಾಗುತ್ತದೆ.

೧೯೩೨ರ ಕಾಯ್ದೆ ಭಂಗ ಚಳುವಳಿಯಲ್ಲಿಯೂ ಬೆಳಗಾವಿ ಅಗ್ರಣಿ ಪಾತ್ರ ವಹಿಸಿತು. ಗಂಗಾಧರರಾವ ದೇಶಪಾಂಡೆ, ನಾರಾಯಣರಾವ ಜೋಶಿ, ಬಳವಂತರಾವ ದಾತಾರ, ಜೀವಣರಾವ ಯಾಳಗಿ, ಬಾಬುರಾವ ಠಾಕುರ, ಪುಂಡಲೀಕಜಿ ಕಾತಗಡೆ, ವಾಮನರಾವ ಬಿದರಿ, ಅಣ್ಣು ಗುರೂಜಿ, ಅಪ್ಪಣ್ಣಾ ಪಾಟೀಲ, ಎಂ. ಪಿ. ಪಾಟೀಲ, ಅನಂತರಾವ ಚಿಕ್ಕೋಡಿ, ರಾಮಚಂದ್ರ ವಡವಿ, ಬಸಪ್ಪಾ ಅರಗಾವಿ, ಚನ್ನಪ್ಪಾ ವಾಲಿ, ಚಿನ್ಮಯಸ್ವಾಮಿ ಓಂಕಾರಮಠ, ವೀರಪ್ಪ ಸುತಗಟ್ಟಿ, ಪದ್ಮರಾಜ ಬೋಗಾರ, ಹುಸೇನಸಾಬ ನದಾಫ, ವೆಂಕರೆಡ್ಡಿ ಹೂಲಿ, ದೇವೇಂದ್ರ ಪಂಡಿತ ಮುಂತಾದ ಸತ್ಯಾಗ್ರಹಿಗಳು ಬಂಧನಕ್ಕೊಳಗಾಗಿ ಜೇಲಿಗೆ ಹೋದರು. ವೆಂಕರಡ್ಡಿ ಹೂಲಿಯವರಿಗೆ ಈ ಆಂದೋಲನಕ್ಕಾಗಿ ಹತ್ತು ವರ್ಷಗಳ ಕಾಲದ ಶಿಕ್ಷೆ ವಿಧಿಸಲಾಯಿತು. ಕರ್ನಾಟಕದಲ್ಲಿ ಅಷ್ಟೇ ಏಕೆ, ಇಡಿಯ ದೇಶದಲ್ಲಿ ಕಾಯ್ದೆಭಂಗ ಚಳುವಳಿ ಮಾಡಿ ಇಷ್ಟು ದೀರ್ಘಾವಧಿ ಶಿಕ್ಷೆಗೆ ಗುರಿಯಾದವರು ಇವರೊಬ್ಬರೇ ಎಂದು ಇತಿಹಾಸ ದಾಖಲಿಸಿದೆ. ಈ ಚಳುವಳಿಯಲ್ಲಿ ಬೆಳಗಾವಿ ಜಿಲ್ಲೆಯಿಂದ ಒಂದು ಸಾವಿರ ಜನ ಸ್ವಾತಂತ್ರ್ಯಯೋಧರು ಜೇಲು ಸೇರಿ ಇತಿಹಾಸ ನಿರ್ಮಿಸಿದರು.

ರಾಷ್ಟ್ರಮಟ್ಟದಲ್ಲಿ ಗಾಂಧೀಜಿ ನೇತೃತ್ವದಲ್ಲಿ ನಡೆಯುತ್ತಿದ್ದ ಉಪ್ಪಿನ ಸತ್ಯಾಗ್ರಹ, ಕರನಿರಾಕರಣೆ, ವಿದೇಶಿ ವಸ್ತುಗಳ ಬಹಿಷ್ಕಾರ ಇವೇ ಮೊದಲಾದ

ಕಾರ್ಯಕ್ರಮಗಳನ್ನು ತಮ್ಮ ಪ್ರದೇಶದ ವ್ಯಾಪ್ತಿಯಲ್ಲಿ ಹಮ್ಮಿಕೊಂಡರು. ಇಟಗಿ ಪರಿಸರದ ಸಾಮಾನ್ಯ ಜನರ ನೆರವಿನೊಂದಿಗೆ ಚಟುವಟಿಕೆಗಳನ್ನು ಯಶಸ್ವಿಯಾಗಿ ನಿರ್ವಹಿಸತೊಡಗಿದರು.

ರಾಷ್ಟ್ರೀಯ ಕಾಂಗ್ರೆಸ್ಸಿನಲ್ಲಿ ಆಗ ಎರಡು ವರ್ಗದ ಸದಸ್ಯರಿದ್ದರು. ನಾಲ್ಕಾಣೆ ಶುಲ್ಕನೀಡಿದವರು ಸಾಮಾನ್ಯ ಸದಸ್ಯರು, ಐದುರೂಪಾಯಿ ತುಂಬಿದವರು ಕ್ರಿಯಾಶೀಲ ಸದಸ್ಯರು. ಕಾಂಗ್ರೆಸ್ ಸಂಸ್ಥೆ ವಿಧಿಸುವ ನಿಯಮಗಳಿಗೆ ಬದ್ಧರಾಗಿ ನಡೆದುಕೊಳ್ಳುತ್ತಿದ್ದ ಕ್ರಿಯಾಶೀಲ ಸದಸ್ಯರು ಖಾದಿವ್ರತಧಾರಿಗಳು. ಖಾದಿ ನೂಲುವುದು ಹಾಗೂ ಖಾದಿ ಧರಿಸುವುದು ಅವರಿಗೆ ಕಡ್ಡಾಯ. ಅವರು ಕಾಂಗ್ರೆಸ್ಸಿನ ಯಾವುದೆ ಅಂಗಸಂಸ್ಥೆಗಳಿಗೂ ಪದಾಧಿಕಾರಿಯಾಗುವ ಹಾಗೂ ಪದಾಧಿಕಾರಿಗಳನ್ನು ಚುನಾಯಿಸುವ ಹಕ್ಕನ್ನು ಹೊಂದಿದವರು. ಕಾಂಗ್ರೆಸ್ಸನ್ನು ಸಂಘಟಿಸಿ ಬಲಪಡಿಸುವ ಕಾರ್ಯದಲ್ಲಿ ಕೂಡ ಆ ಸದಸ್ಯರು ಸಕ್ರಿಯರು. ಅಂತೆಯೆ ಎಲ್ಲರೂ ಕ್ರಿಯಾಶೀಲ ಸದಸ್ಯರಾಗಲು ಬಯಸುತ್ತಿದ್ದರು. ಅದರಿಂದ ಪೈಪೋಟಿ ಹೆಚ್ಚಿತು. ಸಂಸ್ಥೆಯ ಮೇಲೆ ತಮ್ಮ ತಮ್ಮ ಹೆಚ್ಚಿನ ಹಕ್ಕನ್ನು ಸ್ಥಾಪಿಸಲು ಹವಣಿಸತೊಡಗಿದರು. ನಿಷ್ಠಾವಂತ ಹಿರಿಯ ಕಾಂಗ್ರೆಸ್ಸಿಗರನ್ನು ಕಡೆಗಣಿಸುವ ಘಟನೆಗಳಾದವು. ಪದಾಧಿಕಾರಿಗಳಲ್ಲಿ ಅಲ್ಪಸಂಖ್ಯಾತ–ಬಹುಸಂಖ್ಯಾತರೆಂಬ ಒಡಕು ಮೂಡಿತು. ಸದಸ್ಯರಲ್ಲಿ ಪರಸ್ಪರ ಭಿನ್ನಾಭಿಪ್ರಾಯವುಂಟಾಯಿತು. ಅದರಿಂದ ಕಾಂಗ್ರೆಸ್ ಸಂಸ್ಥೆಯ ಸದಸ್ಯತ್ವ ಪಡೆಯುವವರ ಮೇಲೆ ಕೆಲವು ನಿಬಂಧನೆಗಳನ್ನು ಹೇರಲಾಯಿತು.

೧೯೪೨ರಲ್ಲಿ ಗಾಂಧೀಜಿ ಐತಿಹಾಸಿಕ 'ಚಲೇಜಾವ್' ಚಳವಳಿಗೆ ಕರೆಕೊಟ್ಟರು. ಬ್ರಿಟಿಷರ ಹಿಡಿತ ಕಡಿಮೆಯಗುತ್ತಿದ್ದ ಕಾಲವದು. ಎರಡನೆಯ ಮಹಾಯುದ್ಧದ ಪರಿಣಾಮ ಭಾರತವನ್ನೊಳಗೊಂಡಂತೆ ವಿಶ್ವದ ಬಹುತೇಕ ರಾಷ್ಟ್ರಗಳ ಮೇಲೆ ಉಂಟಾಯಿತು.

ಭಾರತದ ಪರಿಸ್ಥಿತಿಯೇನೂ ಭಿನ್ನವಾಗಿರಲಿಲ್ಲ. ಭಾರತೀಯ ಸೈನಿಕರು ಲಕ್ಷ ಲಕ್ಷ ಸಂಖ್ಯೆಯಲ್ಲಿ ಯುದ್ಧದಲ್ಲಿ ಪಾಲ್ಗೊಳ್ಳುವುದು ಅನಿವಾರ್ಯವಾಯಿತು. ಒಂದೆಡೆ ವೈರಿ ರಾಷ್ಟ್ರಗಳ ದಾಳಿ ಇನ್ನೊಂದೆಡೆ ಭಾರತ ಸ್ವಾತಂತ್ರ್ಯಕ್ಕಾಗಿ ನಡೆಸಿದ ಹೋರಾಟ–ಹೀಗೆ ಬ್ರಿಟಿಷರಿಗೆ ಭಾರೀ ಸಂದಿಗ್ಧಸ್ಥಿತಿ ನಿರ್ಮಾಣವಾಯಿತು.



ಮುಂಬೈಯಲ್ಲಿ ಕೈಕೊಂಡ ನಿರ್ಣಯದಂತೆ ೮ ಆಗಸ್ಟ್ ೧೯೪೨ರಂದು ಮಹಾತ್ಮಾ ಗಾಂಧೀಜಿ ನೇತೃತ್ವದಲ್ಲಿ ಚಲೇಜಾವ್ ಚಳವಳಿಯನ್ನು ಆರಂಭಿಸಲು ನಿರ್ಧರಿಸಲಾಯಿತು. ಚಳವಳಿಯನ್ನು ಇನ್ನೇನು ಶುರೂ ಮಾಡಬೇಕು, ಗಾಂಧೀಜಿಯವರನ್ನೊಳಗೊಂಡಂತೆ ಮೌಲಾನಾ ಆಜಾದ್, ವಲ್ಲಭಭಾಯಿ ಪಟೇಲ್, ಜವಾಹರಲಾಲ ನೆಹರೂ ಮೊದಲಾದ ಕ್ರಿಯಾಸಮಿತಿಯ ಪ್ರಮುಖ ನಾಯಕರನ್ನು ಬಂಧಿಸಿ ರಹಸ್ಯ ಸ್ಥಳದಲ್ಲಿಡಲಾಯಿತು. ದೇಶದ ಇತರ ಭಾಗಗಳಲ್ಲೂ ಬಂಧನಸತ್ರ ನಡೆದು ಚಳವಳಿಯ ಆರಂಭಕ್ಕೆ ತೀವ್ರ ಹಿನ್ನಡೆಯಾಯ್ತು. ನಾಯಕರು ಸೆರೆಮನೆ ಸೇರಿದ ಮೇಲೆ ಚಳವಳಿಗಾರರು ಗೊಂದಲಕ್ಕೀಡಾದರು. ನಾಯಕರಲ್ಲಿ ಕೆಲವರು ಭೂಗತರಾಗಿ ಗಾಂಧೀಜಿಯವರ ಆಶಯದಂತೆ ಚಲೇಜಾವ್ ಚಳವಳಿಯನ್ನು ಆರಂಭಿಸಿಯೇ ತೀರಿದರು. ಚಳವಳಿಯ ಕಾವು ದೇಶದ ತುಂಬೆಲ್ಲ ವ್ಯಾಪಿಸಿತು. ಸಭೆ, ಮೆರವಣಿಗೆಗಳು ನಡೆದವು. ಕಾಯ್ದೆಭಂಗವಾದ ಅನೇಕ ನಿದರ್ಶನಗಳಾದವು. ಗಾಂಧೀಜಿ ಜೈಲಿನಲ್ಲಿದ್ದಾಗಲೇ ಹೆಚ್ಚು ಪ್ರಖರವಾಗಿ ತೋರಿದರು.

'ಮಾಡು ಇಲ್ಲವೆ ಮಡಿ' ಎಂಬ ವೀರಘೋಷದೊಂದಿಗೆ ಆರಂಭಗೊಂಡ ಸತ್ಯಾಗ್ರಹದಲ್ಲಿ ಜೀವದ ಹಂಗು ತೊರೆದು ಪಾಲ್ಗೊಂಡ ಕಾರ್ಯಕರ್ತರು ಸುಮ್ಮನೆ ಕೂಡಲಿಲ್ಲ. ಬಂಧನಕ್ಕೊಳಗಾಗಿ ಜೇಲು ತುಂಬುವ ಉದ್ದೇಶವೂ ಅವರದಾಗಿರಲಿಲ್ಲ.

ಚಳವಳಿಯಲ್ಲಿ ಪಾಲೊಳ್ಳುವ ಕಾರ್ಯಕರ್ತರಿಗೆ ನಿಚ್ಚಳ ನಿರ್ದೇಶನ ನೀಡುವ ಬರಹವೊಂದು ಪ್ರಕಟಗೊಂಡಿತು.

ಶಾಲಾಕಟ್ಟಡ, ಪ್ರವಾಸಿ ಮಂದಿರ, ಪೋಸ್ಟ್‌ಆಫೀಸ್‌ಗಳನ್ನು ಸುಡುವುದು, ತಾರಕಂಬಗಳನ್ನು ನಾಶಪಡಿಸುವುದು ಹಿಂಸಾತ್ಮಕ ಹಾಗೂ ವಿನಾಶಕಾರೀ ಕಾರ್ಯಗಳೆಂಬ ಭಾವನೆ ಬರುವುದು ಸಹಜ. ಆದರೆ ಅದನ್ನು ದೇಶದ ಹಿತದ ದೃಷ್ಟಿಯಿಂದ ಸಹಿಸಿಕೊಳ್ಳುವುದು ಅನಿವಾರ್ಯವೆನಿಸಿತು. ಗಾಂಧೀಜಿಯವರ ನಿಕಟವರ್ತಿಗಳಾದ ಕಿಶೋರಲಾಲ್ ಘನಶಾಮ್ ಮಶ್ರುವಲಾ ಅವರು ಕೂಡ ಅಂಥ ಚಟುವಟಿಕೆಗಳನ್ನು ಒಂದು ಬರಹದ ಮೂಲಕ ಸಮರ್ಥಿಸಿಕೊಂಡದ್ದು ಗಮನಾರ್ಹ.

ಸೇನಾ ಹಾಗೂ ಪೋಲೀಸ್ ಪಡೆಗಳು ಕಾವಲು ಕಾಯುತ್ತಿದ್ದರೂ

ಸರಕಾರೀ ಶಾಲಾಕಟ್ಟಡ ಸುಟ್ಟಿದ್ದು, ತಾರಕಂಬಗಳನ್ನು ಕೆಡವಿದ್ದು, ಮುಗಟಖಾನ ಹುಬ್ಬಳ್ಳಿಯ ಪ್ರವಾಸಿ ಮಂದಿರವನ್ನು ಸುಟ್ಟದ್ದು, ಚಾವಡಿ ಸುಟ್ಟದ್ದು–ಎಲ್ಲವೂ ಭಯಂಕರವಾದದ್ದು. ಆದರೆ ಯಾವುದೇ ಪ್ರಾಣಹಾನಿ ಮಾಡದೆ ತಮ್ಮ ಉದ್ದೇಶವನ್ನು ಸಾಧಿಸಿದ್ದು ವಿಶೇಷ.

ಚಿನ್ಮಯಸ್ವಾಮಿಗಳು ಎಂ.ಕೆ. ಹುಬ್ಬಳ್ಳಿಯವರು. ಅವರು ಬೆಂಕಿಸ್ವಾಮಿ ಎಂದೇ ಪ್ರಸಿದ್ಧರು. ಚತುರ ಮಾತುಗಾರರು. ಚಲೇಜಾವ್ ಚಳವಳಿಯಲ್ಲಿ ಈ ತಂಡದೊಂದಿಗಿದ್ದು ತುಂಬ ಚಾಣಾಕ್ಷತನವನ್ನು ಮೆರೆದರು.

ಚನ್ನಪ್ಪ ವಾಲಿ, ಸಾಣಿಕೊಪ್ಪ, ಬಸನಗೌಡ ಪಾಟೀಲ, ಬಸವಣ್ಣೆಪ್ಪ ಅಂಗಡಿ, ನಾಗಪ್ಪ ಗಾಣಿಗಿ, ಗಂಗಾಧರ ದೊಡ್ಡಮನಿ, ಬಸಪ್ಪ ಉಳ್ಳೇಗಡ್ಡಿ, ಶಿವಪ್ಪ ಮಲಶೆಟ್ಟಿ, ಗಂಗಪ್ಪ ಗುಂಡ್ಲೂರ ಮೊದಲಾದವರ ತಂಡವನ್ನು ರಚಿಸಲಾಯಿತು. ಎಲ್ಲರೂ ಪಾಳೆ ತುಂಬುವವರಂತೆ ಹೋದರು. ಆರು ಜನ ಪೊಲೀಸರ ಸಮವಸ್ತ್ರಗಳನ್ನು, ಕೈಯಲ್ಲಿನ ರೈಫಲ್‌ಗಳನ್ನು ಕಸಿದುಕೊಂಡರು. ಹಣವನ್ನೆಲ್ಲ ಲೂಟಿ ಮಾಡಿದರು.

ಕೇವಲ ಹತ್ತು ನಿಮಿಷದಲ್ಲಿ ನಡೆದ ಅದೊಂದು ಮಿಂಚಿನ ಕಾರ್ಯಾಚರಣೆ. ೨೭ ಹಳ್ಳಿಗಳಿಂದ ಸಂಗ್ರಹಿಸಿದ ೨೭೦೦ ರೂಪಾಯಿಗಳು. ಯಾವುದೇ ಅಚಾತುರ್ಯಕ್ಕೆ ಅವಕಾಶ ಕೊಡದೆ ತುಂಬ ಚಾಕಚಕ್ಯತೆಯಿಂದ ಎಲ್ಲವನ್ನೂ ಜರುಗಿಸಿದರು. ಕಾರ್ಯಾಚರಣೆಯಲ್ಲಿ ಪಡೆದ ಯಶಸ್ಸಿನ ಪ್ರತೀಕವಾಗಿ ಗಾಳಿಯಲ್ಲಿ ಗುಂಡು ಹಾರಿಸಿ ಸಂಭ್ರಮಿಸಿದರು. ಒಂದು ಗುಂಡು ಗುಂಪಿನ ಸದಸ್ಯರಾದ ಬಸನಗೌಡ ಪಾಟೀಲರ ಕೈಗೆ ತಾಗಿತು. ಅಪಾಯವೇನೂ ಆಗಲಿಲ್ಲ.

ಸುದ್ದಿ ತಿಳಿದ ಸಶಸ್ತ್ರ ಪಡೆಯವರು ತೋಲಗಿಗೆ ಬಂದು ಶೋಧಿಸಿದರು. ಅಲ್ಲಿಂದ ಇಟಗಿಯತ್ತ ಧಾವಿಸಿ ಸಾಣಿಕೊಪ್ಪ ಮನೆತನದ ಐವತ್ತು ಜನರನ್ನು ಬಂಧಿಸಿ ತೋಲಗಿಯ ಪೊಲೀಸ್ ಅಧಿಕಾರಿಗಳಿಗೆ ಒಪ್ಪಿಸಿದರು. ಪೊಲೀಸ್ ಅಧಿಕಾರಿಗಳಾದ ಘಂಟಿಯವರು ಹಾಗೂ ಆಲೂರ ಅವರು ಎಲ್ಲರನ್ನೂ ನಿರಪರಾಧಿಗಳೆಂದು ಪರಿಗಣಿಸಿ ಮುಕ್ತಗೊಳಿಸಿದರು.

ಭಾರತೀಯರು ನೀತಿವಂತರು, ಸಚ್ಚಾರಿತ್ರ್ಯಶೀಲರು. ಅಂತೆಯೆ ಭಾರತೀಯ ಚಳವಳಿಗಾರರೊಂದಿಗೆ ಬ್ರಿಟಿಷ್ ಅಧಿಕಾರಿಗಳು ಎಚ್ಚರಿಕೆಯಿಂದ



ನಡೆದುಕೊಳ್ಳುತ್ತಿದ್ದರಂತೆ. ಮದ್ದು ಗುಂಡುಗಳನ್ನು ಬಳಸದೆ ಪುಂಡಗಂದಾಯ ವಸೂಲ್ ಮಾಡಿ ಸಮಸ್ಯೆಯನ್ನು ಬಗೆಹರಿಸುತ್ತಿದ್ದರೆಂದು ಸಾಣಿಕೊಪ್ಪರು ಸ್ಮರಿಸಿಕೊಳ್ಳುತ್ತಾರೆ.

ಚಲೇಜಾವ್ ಚಳವಳಿ ಕಾರ್ಯಕರ್ತರ ಮೇಲೆ ಮಾಡಿದ ಪ್ರಭಾವ ಪರಿಣಾಮಗಳು ಅದ್ಭುತವಾದುವು. ಸಾಣಿಕೊಪ್ಪರಂಥ ಕ್ರಿಯಾಶೀಲ ಕಾರ್ಯಕರ್ತರ ಜವಾಬ್ದಾರಿ ಸಹಜವಾಗಿಯೇ ಇಮ್ಮಡಿಗೊಂಡವು. ಚಳವಳಿಯನ್ನು ಜೀವಂತವಾಗಿಡಬೇಕಾದ ಗುರುತರ ಜವಾಬ್ದಾರಿ ಅವರ ಮೇಲಿತ್ತು. ಅಂತೆಯೆ ಅದು ಅವರ ಹೋರಾಟದ ಮಹತ್ವದ ದಶಕವೆನಿಸಿತು.

ವಾಲಿ ಚೆನ್ನಪ್ಪ, ಮರೆಪ್ಪ ಕಮ್ಮಾರ, ಶಂಕರ ಕಮತಗಿ, ಬಸಪ್ಪ ಉಳ್ಳೇಗಡ್ಡಿ, ಬಸವಣ್ಣೆಪ್ಪ ಅಂಗಡಿ ಮೊದಲಾದ ಭೂಗತ ಕಾರ್ಯಕರ್ತರು ಇಟಗಿಯಲ್ಲಿ ಸಭೆ ಸೇರಿದರು. ಚಳವಳಿಯ ಹೊಸ ಹೊಸ ವಿಧಾನಗಳನ್ನು ಕುರಿತು ಹೊಳಹು ಹಾಕಿದರು. ಅಂಚೆಕಚೇರಿ ಮೇಲೆ ದಾಳಿ ಮಾಡುವುದು, ರೇಲ್ವೆ ಸ್ಟೇಶನ್, ಸರಕಾರಿ ವಿಶ್ರಾಂತಿ ಗೃಹಗಳನ್ನು ಸುಡುವುದು, ಬ್ಯಾಂಕುಗಳನ್ನು ಲೂಟಿ ಹೊಡೆಯುವುದು–ಇವೇ ಮೊದಲಾದ ಯೋಜನೆಗಳನ್ನು ಹಾಕಿಕೊಂಡರು.

ಅಂದಿನ ಸಂದರ್ಭದಲ್ಲಿ ಏಳೆಂಟು ಹಳ್ಳಿಗಳಿಗೊಂದು ಅಂಚೆಕಚೇರಿ ಹಾಗೂ ತಾಲೂಕಿಗೆ ಒಂದೆರಡು ತಂತಿ ಕಚೇರಿ ಇರುತ್ತಿದ್ದವು. ಸಂಬಂಧಿಸಿದ ಸಿಬ್ಬಂದಿ ತಮ್ಮ ತಮ್ಮ ಕಚೇರಿಯಲ್ಲೇ ವಾಸಿಸುತ್ತಿದ್ದರು. ಆಡಳಿತದ ಅನುಕೂಲಕ್ಕಾಗಿ ಸಮಾಚಾರ ಇಲಾಖೆಯನ್ನು ಆರಂಭಿಸಿದ್ದ ಬ್ರಿಟಿಷರು ತಮ್ಮ ಹಾಗೂ ಸೇನಾ ಓಡಾಟಕ್ಕಾಗಿ, ಇಂಧನದ ಸಾಗಾಣಿಕೆಗಾಗಿ, ಆಹಾರ ಪೂರೈಕೆಗಳಿಗಾಗಿ ರಾಜ್ಯ ಹಾಗೂ ರಾಷ್ಟ್ರೀಯ ಹೆದ್ದಾರಿಗಳನ್ನು, ರೈಲುಮಾರ್ಗಗಳನ್ನು ನಿರ್ಮಿಸಿ ಸುಸ್ಥಿತಿಯಲ್ಲಿರಿಸಿದ್ದರು.

ಈ ಎಲ್ಲವುಗಳನ್ನು ಹಾಳುಗೆಡವಿದರೆ ಆಂಗ್ಲರ ಆಡಳಿತ ಯಂತ್ರಕ್ಕೆ ಭಾರೀ ಅಡಚಣೆಯಾಗುವುದೆಂಬ ಉದ್ದೇಶ ಕಾರ್ಯಕರ್ತರದು. ಒಮ್ಮೊಮ್ಮೆ ಕಾರ್ಯಕರ್ತರು ಸರಕಾರೀ ಹಣದೊಂದಿಗೆ ಅಂಚೆಕಚೇರಿ ಸಿಬ್ಬಂದಿ ಮನೆಯನ್ನು ಲೂಟಿ ಮಾಡಿದ ಅನುಚಿತ ಘಟನೆ ನಡೆದವೆಂದು ಸಾಣಿಕೊಪ್ಪರು ವಿಷಾದದಿಂದ ನೆನಪಿಸಿಕೊಳ್ಳುತ್ತಾರೆ.

ಒಮ್ಮೆ ಅಂಚೆಕಚೇರಿಯೊಂದನ್ನು ಲೂಟಿ ಹೊಡೆದ ಕಾರ್ಯಕರ್ತರು ಕಾಗದಪತ್ರ–ಹಣವನ್ನಷ್ಟೇ ಅಲ್ಲದೆ ಪೋಸ್ಟ್‌ಮಾಸ್ತರರ ಹೆಂಡತಿಯ ಕೈಯಲ್ಲಿಯ ಬಂಗಾರದ ಬಳೆಗಳನ್ನೇ ಕಸಿದು ತಂದಿದ್ದರು. ಆ ಘಟನೆ ಅಪ್ಪಟ ಗಾಂಧಿವಾದಿಗಳಿಗೆ ಆಘಾತವನ್ನುಂಟು ಮಾಡಿತು. ಅಂಥ ಘಟನೆಗಳು ಭೂಗತ ಕಾರ್ಯಕರ್ತರ ಹೆಸರಿಗೆ ಕಳಂಕ. ಒಂದರ್ಥದಲ್ಲಿ ಅವು ದೇಶದ್ರೋಹದ ಕೆಲಸಗಳೇ. ಅಂತೆಯೆ ಅಂಥ ಸಂದರ್ಭದಲ್ಲಿ ಸಾಣಿಕೊಪ್ಪರು ತುಂಬ ನೊಂದುಕೊಂಡು ತಾವು ಅದನ್ನು ಸಹಿಸಿಕೊಳ್ಳುವುದಿಲ್ಲವೆಂದು ಕಾರ್ಯಕರ್ತರಿಗೆ ಖಡಾಖಂಡಿತವಾಗಿ ತಿಳಿಸಿದರು. ತಪ್ಪು ಮಾಡಿದವರಿಗೆ ಅದರ ಅರಿವಾಯಿತು. ಬಂಗಾರದ ಬಳೆಗಳನ್ನು ಸಂಬಂಧಿಸಿದವರಿಗೆ ಮರಳಿ ನೀಡಲಾಯಿತು.

ಸಾರ್ವಜನಿಕರ ದೃಷ್ಟಿಯಲ್ಲಿ ಸತ್ಯಾಗ್ರಹಿಗಳು ಉನ್ನತ ನೈತಿಕತೆಯನ್ನುಳ್ಳ ದೇಶಪ್ರೇಮಿಗಳು. ಗ್ರಾಮೀಣ ಪ್ರದೇಶದ ಮುಗ್ಧಜನರಂತೂ ಸತ್ಯಾಗ್ರಹಿಗಳನ್ನು ತುಂಬ ಗೌರವದಿಂದ ಕಾಣುತ್ತಾರೆ. ಅಂತೆಯೆ ಎಲ್ಲರೂ ತಮ್ಮ ತಂಡದ ಸದಸ್ಯರಿಂದ ಇಂಥ ಘಟನೆಗಳು ಮರುಕಳಿಸದಂತೆ ತುಂಬ ಎಚ್ಚರದಿಂದ ನಡೆದುಕೊಳ್ಳಬೇಕೆಂದು ಕಾರ್ಯಕರ್ತರಿಗೆಲ್ಲ ಪ್ರಾಂಜಲ ಮನಸ್ಸಿನಿಂದ ಹೇಳಿದರು.

## ಸ್ಥಗಿತಗೊಂಡ ಕ್ವಿಟ್ ಇಂಡಿಯಾ ಚಳವಳಿ

'ಬ್ರಿಟಿಷರೆ, ಭಾರತ ಬಿಟ್ಟು ತೊಲಗಿ' ಚಳವಳಿಯನ್ನು ಸ್ಥಗಿತಗೊಳಿಸಲಾಯಿತು. ಭೂಗತ ಚಟುವಟಿಕೆಗಳು ನಿಂತವು. ಸೆರೆಮನೆಯಲ್ಲಿದ್ದ ರಾಜಕೀಯ ಕೈದಿಗಳು ಬಿಡುಗಡೆ ಹೊಂದಿದರು. ಭೂಗತ ಕಾರ್ಯಕರ್ತರ ಮೇಲಿನ ಮೊಕದ್ದಮೆಗಳನ್ನು ವಾಪಸ್ ಪಡೆಯಲಾಯಿತು. ಆದರೆ ಬಿಡುಗಡೆಗೊಳ್ಳದ ಆರು ಜನರ ಪರವಾಗಿ ಮುದರಡ್ಡಿ ವಕೀಲರನ್ನು ಕೊಟ್ಟ ಸಾಣಿಕೊಪ್ಪ ಅವರು ಛಲಬಿಡದೆ ಪ್ರಯತ್ನಿಸಿ ಆ ಆರೂ ಜನರನ್ನು ಖುಲಾಸೆ ಮಾಡಿಸಿ ಹೋರಾಟಗಾರರ ಗೌರವಕ್ಕೆ ಪಾತ್ರರಾದರು.

ಠಾಣೆಯ ಜೇಲಿನಿಂದ ಬಿಡುಗಡೆಗೊಂಡ ಕರ್ನಾಟಕದ ಹಿರಿಯ ಹೋರಾಟಗಾರ ಗುದ್ಲೆಪ್ಪ ಹಳ್ಳಿಕೇರಿಯವರು ಹುಬ್ಬಳ್ಳಿಗೆ ತೆರಳುವ ಮಾರ್ಗದಲ್ಲಿ ಇಟಗಿಗೆ ಹೋಗಿ ಬಸವಣ್ಣೆಪ್ಪನವರನ್ನು ತಮ್ಮೊಂದಿಗೆ ಕರೆದುಕೊಂಡು ಹೋದರು.



ಕ್ವಿಟ್ ಇಂಡಿಯಾ ಚಳವಳಿ ಸಂಪೂರ್ಣವಾಗಿ ನಿಂತಿತು. ಚಳವಳಿಯಲ್ಲಿ ಪಾಲ್ಗೊಂಡ ಸಮಸ್ತ ಕಾರ್ಯಕರ್ತರ ಸಭೆ ಸವದತ್ತಿ ತಾಲೂಕಿನ ದೊಡ್ಡ ಖಾದಿ ಕೇಂದ್ರವನ್ನು ಹೊಂದಿದ್ದ ಗುರ್ಲಹೊಸೂರಿನಲ್ಲಿ ಸೇರಿತು. ಶ್ರೀರಂಗ ಕಾಮತರು ಆಗ ಗುರ್ಲಹೊಸೂರಿನಲ್ಲೇ ಇದ್ದರು. ಚಳವಳಿಯಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದ ಕಾರ್ಯಕರ್ತರ ಶೌರ್ಯ ಸಾಹಸಗಳನ್ನು ಎಲ್ಲರೂ ಮನಸಾರೆ ಪ್ರಶಂಸಿಸಿದರು.

ಭೂಗತ ಕಾರ್ಯಕರ್ತರಾಗಿ ಹೋರಾಡಿದ ವಾಲಿ ಚೆನ್ನಪ್ಪನವರಿಗೆ ಹಾಗೂ ಸಾಣಿಕೊಪ್ಪರಿಗೆ ಅಂದಿನ ಸಭೆಯಲ್ಲಿ ವಿಶೇಷ ಮಹತ್ವ ನೀಡಲಾಯಿತು. ವಾಲಿಯವರು ಕಾಮತ ಸಾಣಿಕೊಪ್ಪ ಅವರನ್ನೊಳಗೊಂಡಂತೆ ಐದು ಜನರ ಕ್ರಿಯಾಸಮಿತಿ ಅಸ್ತಿತ್ವಕ್ಕೆ ಬಂದಿತು.

ಬೆಳಗಾವಿ ದಕ್ಷಿಣ ಭಾಗದ ಹೋರಾಟದ ಮುಂಚೂಣಿ ನಾಯಕ ಚೆನ್ನಪ್ಪ ವಾಲಿಯವರ ಗೌರವಾರ್ಥ ಎಲ್ಲೆಡೆ ಸಭೆ ಮೆರವಣಿಗೆಗಳು ನಡೆದವು. ವಾಲಿಯವರ ಗುಣಗಾನ ನಡೆಯಿತು.

ತಮ್ಮ ಹಿಡಿತ ಸಡಿಲವಾಗಬಹುದೆಂಬ ಸಂದೇಹದಿಂದ ಶ್ರೀರಂಗ ಕಾಮತರು, ವಾಮನರಾವ್ ಬಿದರಿಯವರು ಅಣ್ಣೂ ಗುರೂಜಿಯವರನ್ನು ಸೇರಿಕೊಂಡರು.

ರಾಷ್ಟ್ರಪ್ರೇಮಿಗಳ ಹೋರಾಟ ಹಾಗೂ ದೇಶಪ್ರೇಮಿಗಳ ಕನಸು ನನಸಾಯಿತು. ೧೫ ಆಗಸ್ಟ್ ೧೯೪೭ರಂದು ಭಾರತ ಸ್ವತಂತ್ರವಾಯಿತು. ಶತಮಾನಗಳ ಶಾಪದಿಂದ ಭಾರತ ವಿಮೋಚನೆ ಹೊಂದಿತು.

೧೯೪೨ರ 'ಚಲೇಜಾವ ಚಳುವಳಿ'ಯಲ್ಲಿಯೂ ಬೆಳಗಾವಿ ಜಿಲ್ಲೆಯ ಯೋಗದಾನ ದೊಡ್ಡದು. ಆಗಸ್ಟ್ ೯ ಉದಯಿಸುವುದರೊಳಗೆ ಅನೇಕ ನಾಯಕರನ್ನು ಬಂಧಿಸಲಾಯಿತು. ಜನರು ರಸ್ತೆಗೆ ಬಂದರು. ಸವದತ್ತಿ ತಾಲೂಕಿನ ಕಡವಿ ಶಿವಾಪೂರದ ಸಾತಪ್ಪ ಟೋಪಣ್ಣನವರ, ನಿಪ್ಪಾಣಿಯ ಶಂಕರ ಪಾಂಗಿರೆ, ಬೈಲಹೊಂಗಲಿನ ರಾಜಪ್ಪ ಹೆಬ್ಬಾರ, ರಾಮಪ್ಪ ದೊಡ್ಡಮನಿ, ಗುರುಸಿದ್ದಪ್ಪ ಬೆಳಗಾವಿ, ಸಿದ್ದಪ್ಪ ಸತ್ತಿಗೇರಿ, ದತ್ತು ಮುತಾಡೆ, ಶಿವಪ್ಪಾ ಹಿರೇಹೊಳಿ ಮತ್ತು ಶಿವಲಿಂಗಪ್ಪ ಕೋತಂಬ್ರಿ ಪೊಲೀಸರ ಗುಂಡಿಗೆ ಬಲಿಯಾಗಿ ಹುತಾತ್ಮರಾದರು.

ನಾಯಕರು ಭೂಗತ ಸತ್ಯಾಗ್ರಹಕ್ಕೆ ಇಳಿದರು. ರೇಲ್ವೆ ಸ್ಟೇಷನ್‌ಗಳು ಬೆಂಕಿಗೆ ಆಹುತಿಯಾದವು. ಸುಲಧಾಳ, ರಾಯಬಾಗ, ದೇಸೂರ, ಗುಂಜಿ ಮತ್ತು ಸುಳೇಭಾವಿ ರೇಲ್ವೆ ಸ್ಟೇಶನ್‌ಗಳು ಬೂದಿಯಾದವು. ಹಳ್ಳಿಯ ಸರ್ಕಾರಿ ಚಾವಡಿಗಳು, ಪೋಸ್ಟ್ ಆಫೀಸ್‌ಗಳು, ಸರ್ಕಾರಿ ಭವನಗಳು, ಡಾಕ್ ಬಂಗ್ಲೆಗಳು ಕ್ರಾಂತಿಕಾರಿಗಳ ಸಿಟ್ಟಿಗೆ ಒಳಗಾದವು. ಪೋಲಿಸ್ ಸ್ಟೇಷನ್‌ಗಳ ಮೇಲೆ ದಾಳಿ ಮಾಡಿ ಅಲ್ಲಿದ್ದ ಬಂದೂಕುಗಳನ್ನು ಲೂಟಿ ಮಾಡಲಾಯಿತು. ತಂತಿ ಕಂಬಗಳನ್ನು ಉರುಳಿಸಲಾಯಿತು. ಇದರಿಂದ ಸರ್ಕಾರದ ಆಡಳಿತದ ವ್ಯವಸ್ಥೆಯೇ ಕುಸಿದು ಬೀಳುವಂತಾಯಿತು.

೧೯೪೪ರ ಮೇ ತಿಂಗಳಿನಲ್ಲಿ ಗಾಂಧೀಜಿಯವರ ಬಿಡುಗಡೆ ಆಯಿತು. ಭೂಗತರಾಗಿದ್ದವರು ಚಳುವಳಿಯನ್ನು ನಿಲ್ಲಿಸಿ ಪ್ರಕಟವಾಗಬೇಕೆಂದು ಗಾಂಧೀಜಿಯವರು ಆದೇಶಿಸಿದರು. ಅಲ್ಲಿಯವರೆಗೆ ಭೂಗತರಾಗಿ ಸರ್ಕಾರವನ್ನು ನಡುಗಿಸಿದ ಕ್ರಾಂತಿಕಾರಿಗಳು ಪ್ರಕಟವಾಗಿ ಬಂಧನಕ್ಕೊಳಗಾದರು. ಗಾಂಧೀಜಿಯವರ ಆದೇಶ ಬರುವವರೆಗೆ ಸತ್ಯಾಗ್ರಹವನ್ನು ಜೀವಂತವಾಗಿಸಿಟ್ಟ ಹಿರಿಮೆ ಬೆಳಗಾವಿ ಜಿಲ್ಲೆಯ ಸತ್ಯಾಗ್ರಹಿಗಳಿಗೆ ಸಲ್ಲುತ್ತದೆ.

**ಕವಿಗಳ ಪಾತ್ರ**

ಆ ಕಾಲದ ಬೆಳಗಾವಿ ಜಿಲ್ಲೆಯ ಕವಿಗಳು ದೇಶಭಕ್ತಿಯ ಕವನಗಳನ್ನು ರಚಿಸಿ ದೊಡ್ಡ ಕ್ರಾಂತಿಯನ್ನೇ ಮಾಡಿದ್ದರು. ೧೯೧೮ರ ಸುಮಾರಿಗೆ ಆನಂದಕಂದರು 'ರಾಷ್ಟ್ರೀಯ ಪದ್ಯಾವಳಿ' ಎಂಬ ಗೀತೆಗಳ ಸಂಕಲನ ಪ್ರಕಟಿಸಿದ್ದರು. ಅದರಲ್ಲಿ ದೇಶಭಕ್ತಿಯ ಕುರಿತು ಯುವಜನರಲ್ಲಿ ಪ್ರೇರಣೆ ನೀಡುವ ಮೌಲಿಕ ಕವನಗಳಿದ್ದವು. ಈ ಕೃತಿಗಳನ್ನು ಬ್ರಿಟಿಷರು ನಿಷೇಧಿಸಿದ್ದರು. ಆನಂದಕಂದರಂತೆ ರಾಷ್ಟ್ರಸೇವೆಗೆ ಸಮರ್ಪಿಸಿಕೊಂಡ ಮತ್ತೊಬ್ಬ ಕವಿಗಳೆಂದರೆ ಆನಂದಕವಿಗಳು. ದೇಶಸೇವೆಯೇ ಈಶಸೇವೆ ಎಂಬ ಭಕ್ತಿಭಾವ ಆನಂದಕವಿಗಳದು. ಲೋಕಮಾನ್ಯ ತಿಲಕ ಮತ್ತು ಗಾಂಧೀಜಿಯವರ ಸ್ವಾತಂತ್ರ್ಯ ಹೋರಾಟದ ಎರಡೂ ಮಾದರಿಗಳು ಅವರನ್ನು ಆಕರ್ಷಿಸಿದ್ದವು. ಸ್ವಾತಂತ್ರ್ಯ ಎಂಬುದು ಆಸ್ತಿ, ದುಡಿಯದೆ ಅದು ಸಿಗುವುದಿಲ್ಲ ಎಂಬ ನಂಬಿಕೆ ಅವರದು. ಅದಕ್ಕಾಗಿ ಸ್ವಾತಂತ್ರ್ಯ ಹೋರಾಟದಲ್ಲಿ ಜನರೆಲ್ಲ ಸ್ಫೂರ್ತಿಯಿಂದ



ಪಾಲ್ಗೊಳ್ಳಬೇಕೆಂದು ಹೇಳುತ್ತಾರೆ. ಗಾಂಧೀಜಿಯವರ ಸತ್ಯಾಗ್ರಹ, ಸೇವಾಗ್ರಾಮ, ಅಸಹಕಾರ ಮಾರ್ಗದ ಮೂಲಕ ಸ್ವಾತಂತ್ರ್ಯ ಸಾಧಿಸುವುದು ನಮ್ಮ ಗುರಿಯಾಗಬೇಕೆಂದು ಆನಂದಕವಿ ಹಂಬಲಿಸಿದ್ದಾರೆ. ಗಾಂಧೀಜಿಯವರು ಉಪವಾಸ ಸತ್ಯಾಗ್ರಹ ಮಾಡುವಾಗ ಇವರೂ ಉಪವಾಸ ವ್ರತ ಕೈಕೊಳ್ಳುತ್ತಿದ್ದರು. ಖಾದಿ ಉಡುಪನ್ನೇ ಧರಿಸುತ್ತಿದ್ದರು. ಸ್ವಾತಂತ್ರ್ಯ ಸಿಗುವವರೆಗೆ ಕೋಟು, ಟೊಪ್ಪಿಗೆ ಹಾಕುವುದಿಲ್ಲ ಎಂದು ಪ್ರತಿಜ್ಞೆ ಮಾಡಿದ್ದರು. ದೇಶಭಕ್ತರು ಭೂಗತ ಚಳವಳಿಯಲ್ಲಿ ತೊಡಗಿದಾಗ ಅವರ ಕುಟುಂಬಗಳಿಗೆ ನೆರವು ನೀಡಿದ್ದಾರೆ. ಹೀಗೆ ವೈಯಕ್ತಿಕವಾಗಿ ಸ್ವಾತಂತ್ರ್ಯ ಚಳವಳಿಯ ವ್ರತಗಳನ್ನು ಪಾಲಿಸುತ್ತಿದ್ದ ಕವಿಗಳು ಅನೇಕ ಸ್ಫೂರ್ತಿದಾಯಕ ದೇಶಭಕ್ತಿ ಹಾಡುಗಳನ್ನು ಬರೆದಿರುವರು.

ಶಾಲೆಯ ಮಕ್ಕಳ ಪ್ರಭಾತಫೇರಿಗಾಗಿ, ಕವಾಯತ ಸಲುವಾಗಿ ಹಾಡುಗಳನ್ನು ಬರೆದಿರುವರು.

**ನಾಡ ಗುಡಿಯನು ನಲ್ಮೆಯಿಂದಲಿ ಗಾನಗೈಯುತ ನಮಿಸುವಾ**
**ಹಾಡಹರುಷದಿ ಪ್ರೇಮಪೂರ್ವಕ ನಾಡಸೇವೆಯಗೈಯುವಾ**
**ಮೂರು ಬಣ್ಣದಿ ಮೆರೆವ ನಮ್ಮಯ ನಾಡಗುಡಿಯನು ನಮಿಸುವಾ**
**ವೀರ ಭಾರತ ಕೀರ್ತಿ ಬೆಳೆಸುವ ರಾಷ್ಟ್ರಗೀತೆಯ ಹಾಡುವಾ**

ಎಂದು ಮಕ್ಕಳು ಹಾಡುತ್ತ, ಊರು ಸುತ್ತಿ ಜನರಲ್ಲಿ ಜಾಗೃತಿ ಮೂಡಿಸುವಂತಹ ಗೇಯ ಸಾಹಿತ್ಯವನ್ನು ಕವಿಗಳು ಸೊಗಸಾಗಿ ರಚಿಸಿದ್ದಾರೆ.

ಖಾದಿಗೀತೆ, ಖಾದಿ ಮಹಾತ್ಮೆ, ಧನ್ಯ ಧನ್ಯ ಭಾರತಮಾತೆ, ವೀರಶಿವಾಜಿ, ಪೂಜ್ಯ ಬಾಪೂಜಿ, ವೀರ ನೇತಾಜಿ ಮುಂತಾದ ಕವನಗಳು ಸ್ವಾತಂತ್ರ್ಯ ಚಳವಳಿಯ ಹಿನ್ನೆಲೆಯಲ್ಲಿಯೇ ರಚನೆಯಾಗಿವೆ.

**ಕೊನೆಯ ಮಾತು**

ಈ ಸ್ವಾತಂತ್ರ್ಯಯೋಧರ ಬೆವರಿನಿಂದ ಸ್ವಾತಂತ್ರ್ಯ ವೃಕ್ಷ ಉದಿಸಿ ಬಂದಿತು ಎಂದರೆ ಅತಿಶಯೋಕ್ತಿ ಎನಿಸುವುದಿಲ್ಲ. ಅವರ ತ್ಯಾಗ ಬಲಿದಾನದಿಂದ ೧೫–೦೮–೧೯೪೭ರಂದು ಈ ರಾಷ್ಟ್ರಕ್ಕೆ ಆಂಗ್ಲರಿಂದ ಮುಕ್ತಿ ದೊರೆಯಿತು. ಕೊಹಿಮಾದ ಓರ್ವ ಯೋಧನ ಪ್ರತಿಮೆ ಕೆಳಗೆ ಈ ಉಲ್ಲೇಖವಿದೆ.

**ಗೆಳೆಯರೆ ನೀವು ನಿಮ್ಮ ಮನೆಗೆ**
**ಮರಳಿ ಹೋದ ಮೇಲೆ ದಯವಿಟ್ಟು**
**ನಮ್ಮ ಮಕ್ಕಳಿಗೆ ಹೇಳಿ ನಿಮ್ಮ ನಾಳೆಯ**
**ಕನಸುಗಳನ್ನು ನನಸು ಮಾಡಲು**
**ನಮ್ಮ ಇಂದಿನ ಬದುಕು ತ್ಯಾಗ ಮಾಡಿದ್ದೇವೆ.**

ಎ.ಎಸ್. ಕುಲಕರ್ಣಿಯವರು Gift of Patriotism ಎಂಬ ಪುಸ್ತಕದಲ್ಲಿ ಬರೆಯುತ್ತಾರೆ. 'ಇದು ಅನಕ್ಷರಸ್ಥ, ಮುಗ್ಧ, ಮೂಕ, ಬಡವ ಹಾಗು ಹಸಿದ ಜನರ ಗೆಲುವಾಗಿದೆ. ಅವರ ಕೈಯಲ್ಲಿದ್ದ ಆಯುಧವೆಂದರೆ ಗಾಂಧೀಜಿ ನೀಡಿದ ಅಹಿಂಸೆ ಮತ್ತು ಅಸಹಕಾರ'.

ಬೇರೆಯವರಿಗೆ ಅಧೀನವಾಗಿರದೆ ತಮಗನಿಸಿದಂತಿರಬಲ್ಲ ವ್ಯಕ್ತಿಗಳನ್ನು ನಾವು ಸ್ವತಂತ್ರರು ಎಂದು ಕರೆಯುತ್ತೇವೆ. ಇಂಥ ಪ್ರಜೆಗಳ ದೇಶ ಸ್ವಾತಂತ್ರ್ಯವನ್ನು ಹೊಂದಿದ ಸ್ವರಾಜ್ಯ.

ಪಾರತಂತ್ರ್ಯದ ಸಂಕೋಲೆಯೊಳಗೆ ಸಿಕ್ಕು ನುಗ್ಗಾದ ಭರತ ಖಂಡವನ್ನು ಬಂಧಮುಕ್ತಗೊಳಿಸಲು ನಾವು ಶತ–ಶತಮಾನಗಳ ದೀರ್ಘಕಾಲ ಹೋರಾಡಬೇಕಾಯಿತು. ಅಪಾರ ತ್ಯಾಗ–ಬಲಿದಾನಗಳನ್ನು ಮಾಡಬೇಕಾಯಿತು. ಆಳರಸರ ಕ್ರೂರ ದೌರ್ಜನ್ಯಕ್ಕೆ ಒಳಗಾಗಬೇಕಾಯಿತು. ಕಷ್ಟನಷ್ಟಗಳಿಗೆ ಸಿಲುಕಬೇಕಾಯಿತು. ಇದು ಒಂದು ರೋಮಾಂಚಕಾರಿ ಕಥೆ.

ನಮ್ಮ ಸ್ವಾತಂತ್ರ್ಯ ಹೋರಾಟದ ಕಥೆ ಒಂದು ರಿಲೇ ಆಟ ಇದ್ದ ಹಾಗೆ. ಸ್ವಾತಂತ್ರ್ಯ ಒಬ್ಬ ವ್ಯಕ್ತಿಯಿಂದ ಸಿಕ್ಕಿದ್ದಲ್ಲ; 'ಬಾ' ಎಂದಾಗ ಬಂದದ್ದಲ್ಲ. ಬ್ರಿಟಿಷರು ಎಂದು ಬಂದು ನಮ್ಮ ದೇಶವನ್ನು ಹೊಕ್ಕರೋ, ಅಂದಿನಿಂದ ಅವರನ್ನು ಹೊರಹಾಕುವ ಪ್ರಯತ್ನ ನಡದೇ ಇದ್ದವು. ಅವು ಅಸಂಘಟಿತ ಪ್ರಯತ್ನಗಳಾದ್ದರಿಂದ ಬಲಿಷ್ಠ ಬ್ರಿಟಿಷ ಸಾಮ್ರಾಜ್ಯಶಾಹಿಯ ಮುಂದೆ ಅವರ ಆಟ ನಡೆಯದೆ ಸೋಲೊಪ್ಪಿಕ್ಕೊಳ್ಳಬೇಕಾಯಿತು. ಹೀಗಾಗಿ ಅವು ಇತಿಹಾಸದ ಪುಟಗಳಲ್ಲಿ ದಾಖಲಾಗಲಿಲ್ಲ. ೧೭೫೭ ಪ್ಲಾಸಿ ಕಾಳಗ, ೧೮೨೪ ಕಿತ್ತೂರು ಕ್ರಾಂತಿ, ೧೮೫೭ ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ, ಝಾಂಸಿರಾಣಿ ಲಕ್ಷ್ಮೀಬಾಯಿ ಕಾಳಗ, ನರಗುಂದ ಬಂಡಾಯಗಳಂಥ ಸಾವಿರಾರು ಸಾಮೂಹಿಕ



ಹೋರಾಟಗಳು ಕೊನೆಯ ಗಳಿಗೆಯಲ್ಲಿ ಯಶಸ್ವಿಯಾಗದಿರುವುದು ನಮ್ಮ ದೇಶದ ದೌರ್ಭಾಗ್ಯ.

ಮಹಾತ್ಮಾ ಗಾಂಧೀಜಿ ಅವರ ನೇತೃತ್ವದಲ್ಲಿ ನಡೆದ ಸ್ವಾತಂತ್ರ್ಯಾಂದೋಲನದಲ್ಲಿ ೧೯೪೨ ರ ಸ್ವಾತಂತ್ರ್ಯ ಚಳುವಳಿ ಒಂದು ಮೈನವಿರೇಳಿಸುವ ಘಟ್ಟ. ದೇಶವನ್ನು ಸ್ವತಂತ್ರಗೊಳಿಸುವ ಮಹಾಸಮರದಲ್ಲಿ ಮುದುಕರು–ಯುವಕರು–ಕಿರಿಯರು, ಹೆಣ್ಣು–ಗಂಡು, ಬಡವ–ಶ್ರೀಮಂತರು ಭೇದವಿಲ್ಲದೆ ಪಾಲ್ಗೊಂಡರು. ಹೊಲಕ್ಕೆ ಹೋದ ರೈತ ತಿರುಗಿ ಮನೆಗೆ ಸೇರಲಿಲ್ಲ; ಕೂಲಿ ಮಾಡುವ ಕಾರ್ಮಿಕ ತನ್ನ ಸಂಸಾರದ ಬಗೆಗೆ ಚಿಂತೆ ಮಾಡಲಿಲ್ಲ. ನಮ್ಮ ಚಳುವಳಿಗಾರರಿಗೆ ದೇಶಸೇವೆ ಒಂದು ಧರ್ಮಕಾರ್ಯವಾಗಿತ್ತು. ಅದಕ್ಕೆಂದೇ ವಿದ್ಯಾರ್ಥಿಗಳು ವರ್ಗ ಬಹಿಷ್ಕರಿಸಿದರು. ಪರದೇಶಿ ಬಟ್ಟೆಗಳನ್ನು ಸುಟ್ಟು ಹಾಕಿದರು. ಸ್ವದೇಶಿ ಬಟ್ಟೆಗಳನ್ನು ತೊಟ್ಟರು. ಯುವಕರು ಸರಕಾರಿ ಕೆಲಸಕ್ಕೆ ರಾಜೀನಾಮೆ ನೀಡಿದರು. ಸರಕಾರದ ವಿರುದ್ಧ ಘೋಷಣೆ ಕೂಗಿದರು. ರೇಲ್ವೆ ಹಳಿ ಕಿತ್ತರು. ಕಚೇರಿ ಸುಟ್ಟರು. ಸ್ಟೇಶನ್‌ಗಳಿಗೆ ಬೆಂಕಿಯಿಟ್ಟರು. ದಪ್ತರಗಳನ್ನು ಧ್ವಂಸ ಮಾಡಿದರು. ಬ್ಯಾಂಕ ಒಡೆದರು. ಪಾಳೆ ಲೂಟಿ ಮಾಡಿದರು. ಕೈಗೆ ಸಿಕ್ಕ ಬ್ರಿಟಿಷ ಅಧಿಕಾರಿಗಳ ರುಂಡ ಹಾರಿಸಿದರು.

ನಮ್ಮ ಸಣ್ಣ ಹುಡುಗರ ಉತ್ಸಾಹವಂತೂ ಹೇಳತೀರದು. ಕುಸ್ತಿ–ಕಬ್ಬಡ್ಡಿ–ಖೋಖೋ ಆಡುವ ನೆವದಿಂದ ಬೆಳಂದಿಗಳ ರಾತ್ರಿ ಬಂದು ಬೈಲಿನಲ್ಲಿ ಕೂಡಿ ದೇಶದ ಬಗೆಗೆ ಚಿಂತಿಸುತ್ತಿದ್ದರು. ವಯಸ್ಸಿಗೆ ಮೀರಿದ ಸಾಹಸಕ್ಕೆ ಅವರು ಉತ್ಸುಕರಾಗಿದ್ದರು. ಅವರ ಅಭ್ಯಾಸ ಕೋಣೆಯೊಳಗೆ ಸದಾ ಸ್ಫೂರ್ತಿದಾಯಕ ವಿವೇಕಾನಂದ, ಅರವಿಂದ ಮಹರ್ಷಿ ರಾಣಾ ಪ್ರತಾಪ, ಶಿವಾಜಿ, ಕಿತ್ತೂರು ಚೆನ್ನಮ್ಮ, ಝಾಂಸಿರಾಣಿ, ತಾತ್ಯಾಟೋಪಿ, ಸಾವರಕರ, ಚಾಪೇಕರ ಸಹೋದರರು ಮುಂತಾದವರ ಭಾವಚಿತ್ರಗಳು ವಿಜೃಂಭಿಸುತ್ತಿದ್ದವು. ಅವರ ಆರಾಧ್ಯದೈವ ಹನುಮಂತ ಅವರ ಕೈಗಳ ಮೇಲೆ, ವಿಶಾಲ ವಕ್ಷದ (ಎದೆ) ಮೇಲೆ ಮೂಡಿರುತ್ತಿದ್ದನು. ಅವರ ಪುಸ್ತಕಗಳ ಹೊದಿಕೆಯ ಮೇಲೆ ಕ್ರಾಂತಿಕಾರಿಗಳ ಭಾವಚಿತ್ರಗಳು. ಶಾಲೆಗಳಲ್ಲಿ ಗೋಡೆಗಳ ಮೇಲೆ ಹಾಕಿದ್ದ ಪಂಚಮಜಾರ್ಜರ ಭಾವಚಿತ್ರ ಒಡೆದು ಹರಿದು ಹಾಕಿದಾಗ ಪೋಲಿಸರ ಬಡಿತಕ್ಕೂ ಹೆದರಲಿಲ್ಲ. ಪ್ರತಿ ಬಡಿತಕ್ಕೆ ಜೈಹಿಂದ ಉಚ್ಚರಿಸಿದ ಉತ್ಸಾಹ ಅವರದು. ಈ ಹೋರಾಟದಲ್ಲಿ

ಹೆಣ್ಣುಮಕ್ಕಳೂ ಹಿಂದೆ ಬೀಳಲಿಲ್ಲ. ಚಳುವಳಿಗಾರರನ್ನು ಪತ್ತೆ ಹಚ್ಚುವ ಕಾರಣದಿಂದ ಮನೆಗಳನ್ನು ಹೊಕ್ಕ ಪೋಲೀಸ ಅಧಿಕಾರಿಗಳ ಕಣ್ಣಿಗೆ ಕಾರಪುಡಿ ಗೊಜ್ಜಿ ಕಟ್ಟಿ ಹಾಕಿದರು. ಶಿಕ್ಷೆ ಆದಾಗ ಕಂಕುಳಲ್ಲಿ ಮಕ್ಕಳನ್ನೆತ್ತಿಕೊಂಡು ಜೈಲಿಗೆ ಹೋದರು.

ಈ ಚಳುವಳಿಯ ಅಗ್ನಿಜ್ವಾಲೆ ತನ್ನ ಕೆನ್ನಾಲಿಗೆಯನ್ನು ಎಲ್ಲೆಡೆಗೂ ಚಾಚಿತು. ಚಳುವಳಿಗಾರರ ಉತ್ಸಾಹ ಅಧಿಕಗೊಂಡಿತು. ದೇಶಭಕ್ತಿ ಗೀತೆಗಳನ್ನು ಹಾಡುತ್ತ ಊರು–ಕೇರಿಗಳನ್ನು ಸುತ್ತುತ್ತ ಅವರು ಜನರನ್ನು ಸಂಘಟಿಸಿದರು. ವೀರೋಚಿತ ಗೀತೆಗಳನ್ನು ಎದೆಯುಬ್ಬಿಸಿ ಹಾಡುತ್ತ ಸಾಗಿದಾಗ ಕೇಳುವವರ ರಕ್ತ ಕುದಿಯುತ್ತಿತ್ತು. ನಿತ್ಯ ಪ್ರಭಾತಫೇರಿ, ಮೆರವಣಿಗೆ ಭಾಷಣಗಳಿಂದ ವಾತಾವರಣಕ್ಕೆ ನಡುಕ ಹುಟ್ಟಿತು. ಬ್ರಿಟೀಷರ ಹತಾಶೆ ಭಾವದಿಂದ ದೌರ್ಜನ್ಯವೆಸಗಲು ಮುಂದಾದರು. 'ಲಾಠಿ ಚಾರ್ಜ್', 'ಗೋಳಿಬಾರ'ಗಳಿಂದ ಜನರನ್ನು ನಿಯಂತ್ರಿಸಲು ಹೆಣಗಿದರು. ನಮ್ಮ ಗಂಡುಗಲಿಗಳು ಗುಂಡಗಳಿಗೆ ಹೆದರಲಿಲ್ಲ. ಎದೆಯೊಡ್ಡಿದರು. ಲಾಠಿ ಪೆಟ್ಟು ತಿಂದರು. ರಕ್ತ ಚಿಮ್ಮಿತು. 'ಭಾರತ ಮಾತಾಕಿ ಜೈ' ಘೋಷಣೆ ಮುಗಿಲ ಮುಟ್ಟಿತು. ಪೋಲೀಸರ ದೌರ್ಜನ್ಯ ಅಧಿಕಗೊಂಡಿತು. ಲಕ್ಷಾವಧಿ ಯುವಕರ ರಕ್ತದಿಂದ ನಮ್ಮ ನೆಲ ತೊಯ್ದುಹೋಯಿತು.

ಅಸಂಖ್ಯಾತ ವ್ಯಕ್ತಿಗಳ ತ್ಯಾಗ–ಬಲಿದಾನಗಳಿಂದ ಕೊನೆಗೂ ನಾವು ಸ್ವಾತಂತ್ರ್ಯವನ್ನು ಪಡೆದುಕೊಂಡೆವು. ಪ್ರಯತ್ನಕ್ಕೆ ಫಲ ಸಿಕ್ಕಿತು. ಪ್ರತಿಯೊಬ್ಬರ ಮುಖದ ಮೇಲೆ ಮಂದಹಾಸ. ಊರು–ಕೇರಿಗಳೆಲ್ಲ ತಳಿರು–ತೋರಣಗಳಿಂದ ಅಲಂಕೃತಗೊಂಡವು. ತ್ರಿವರ್ಣಧ್ವಜ ಹಾರ ತೊಡಗಿತು. ಹಾಡು–ಕುಣಿತ–ಡೊಳ್ಳು–ಜಾಗಟೆಗಳ ನಿನಾದ ಮುಗಿಲಮುಟ್ಟಿತು. ಎಲ್ಲ ಕಡೆಗೂ ಹರ್ಷವೇ ಹರ್ಷ.

❖ ❖ ❖

## ಅಮೃತ ಮಹೋತ್ಸವ ಪ್ರಕಟಣೆ – ೭೫ ಕಿರುಪುಸ್ತಕಗಳ ಪಟ್ಟಿ
## ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ

| ಕ್ರಸಂ. | ಪುಸ್ತಕದ ಹೆಸರು | ಲೇಖಕರ ಹೆಸರು | ಬೆಲೆ |
|---|---|---|---|
| ೧. | ತುರುವನೂರು | ಡಾ. ಪಿ. ಯಶೋದಾ ರಾಜಶೇಖರಪ್ಪ | ೩೦/– |
| ೨. | ಚಿತ್ರದುರ್ಗ | ಡಾ. ಬಿ. ರಾಜಶೇಖರಪ್ಪ | ೩೦/– |
| ೩. | ರಾಮಸ್ವಾಮಿ ವೃತ್ತ | ಮಂಜುನಾಥ ಹೆಚ್.ಎಲ್. | ೩೦/– |
| ೪. | ಸುಬ್ಬರಾಯನ ಕೆರೆ | ಡಾ. ಇಂದಿರಾ ಬಿ.ಪಿ. | ೩೦/– |
| ೫. | ಬದನವಾಳು | ಡಾ. ಇಂದಿರಾ ಬಿ.ಪಿ. | ೩೦/– |
| ೬. | ತಗಡೂರು | ಡಾ. ಎಚ್.ಎಸ್. ಉಷಾರಾಣಿ | ೩೦/– |
| ೭. | ಶಿವಪುರ | ಡಾ. ಲಿಂಗರಾಜು | ೩೦/– |
| ೮. | ಮಂಡ್ಯ | ಡಾ. ಶಿವರಾಮು ಎಸ್. | ೩೦/– |
| ೯. | ಚಾಮರಾಜನಗರ | ಡಾ. ಸುಂದ್ರೇಶ ಎನ್. | ೩೦/– |
| ೧೦. | ಗುಂಡ್ಲುಪೇಟೆ | ಕವಿತಾ ಎ. | ೩೦/– |
| ೧೧. | ಗೊರೂರು | ಡಾ. ಯೋಗೇಶ್ ಎನ್.ಇ. | ೩೦/– |
| ೧೨. | ಅರಸೀಕೆರೆ | ಡಾ. ಮಂಜುನಾಥ ಜಿ.ಆರ್. | ೩೦/– |
| ೧೩. | ಹೊಸರಿತ್ತಿ | ಡಾ. ಹೇಮಪ್ಪ ಬ. ಕೆಂಚಳ್ಳಿ | ೩೦/– |
| ೧೪. | ಕನ್ನೇಶ್ವರ | ಡಾ. ಚಾಮರಾಜ ಕಮ್ಮಾರ | ೩೦/– |
| ೧೫. | ಚಳ್ಳಕೊಡ್ಲೂರು | ರಾಮಣ್ಣ ಹವಳೆ | ೩೦/– |
| ೧೬. | ನ್ಯಾಷನಲ್ ಹೈಸ್ಕೂಲು | ಟಿ.ಕೆ. ತಿಮ್ಮರಾಜ ಶೆಟ್ಟಿ | ೩೦/– |

| | | | |
|---|---|---|---|
| ೧೭. | ಬನಪ್ಪ ಪಾರ್ಕ್ | ರಮೇಶ ದೊಡ್ಡಪುರ | ೩೦/– |
| ೧೮. | ಮಲ್ಲೇಶ್ವರ | ಕೆ.ಎಲ್. ನಟರಾಜ್ | ೩೦/– |
| ೧೯. | ದಂಡುಪ್ರದೇಶ | ಪ್ರಮೋದ್ ನ. ಗೋ. | ೩೦/– |
| ೨೦. | ದೇವನಹಳ್ಳಿ | ಕೆ.ಆರ್. ನರಸಿಂಹನ್ | ೩೦/– |
| ೨೧. | ದೊಡ್ಡಬಳ್ಳಾಪುರ | ಡಿ.ಎಂ. ಘನಶ್ಯಾಮ | ೩೦/– |
| ೨೨. | ರಾಮನಗರ | ಎಸ್. ಶರತ್ ಚಂದ್ರ | ೩೦/– |
| ೨೩. | ಕನಕಪುರ | ಡಾ. ಎಸ್.ಎಚ್. ಭುವನೇಶ್ವರ | ೩೦/– |
| ೨೪. | ಶ್ರೀನಿವಾಸಪುರ | ಪ್ರೊ. ಕೆ.ಆರ್. ಜಯಶ್ರೀ | ೩೦/– |
| ೨೫. | ಬಂಗಾರಪೇಟೆ | ಪ್ರೊ. ಕೆ.ಆರ್. ಜಯಶ್ರೀ | ೩೦/– |
| ೨೬. | ವಿದುರಾಶ್ವತ್ಥ | ಡಾ. ಎಸ್.ಜಿ. ರಾಮದಾಸ ರೆಡ್ಡಿ | ೩೦/– |
| ೨೭. | ಈಸೂರು | ಮಾರ್ಪಳ್ಳಿ ಆರ್. ಮಂಜುನಾಥ್ | ೩೦/– |
| ೨೮. | ನಗರ(ಬಿದನೂರು) | ಚಿನ್ಮಯ ಎಂ.ಸಿ. | ೩೦/– |
| ೨೯. | ಚನ್ನಗಿರಿ | ಡಾ. ಕೆಳದಿ ವೆಂಕಟೇಶ ಜೋಯಿಸ್ | ೩೦/– |
| ೩೦. | ದಾವಣಗೆರೆ | ಸಹನಾ ಚೇತನ್ | ೩೦/– |
| ೩೧. | ಸಿಂದಗಿ | ಡಾ. ರಮೇಶ ಎಸ್. ಕತ್ತಿ | ೩೦/– |
| ೩೨. | ಮಸಬಿನಾಳ | ಶಂಕರ ಬೈಚಬಾಳ | ೩೦/– |
| ೩೩. | ಸಾರವಾಡ | ಡಾ. ಸೋಮಶೇಖರ ವಾಲಿ | ೩೦/– |
| ೩೪. | ಹಲಸಂಗಿ | ಶ್ರೀ ಸುಮಿತ್ ಮೇತ್ರಿ | ೩೦/– |



| | | | |
|---|---|---|---|
| ೩೫. | ನರಗುಂದ | ಡಾ. ನಿಂಗು ಸೊಲಗಿ | ೩೦/– |
| ೩೬. | ಮುಂಡರಗಿ | ಡಾ. ಉಮೇಶ ತಿಮ್ಮಾಪುರ | ೩೦/– |
| ೩೭. | ಹಲಗಲಿ | ಡಾ. ವಿಜಯಶ್ರೀ ಇಟ್ಟಣ್ಣವರ | ೩೦/– |
| ೩೮. | ಬಿಸನಾಳ | ಡಾ. ವಿನಯಕುಮಾರ್ ಹಿರೇಮಠ | ೩೦/– |
| ೩೯. | ಬಾಗಲಕೋಟೆ | ರಾಮ ಮನಗೂಳಿ | ೩೦/– |
| ೪೦. | ಬಾದಾಮಿ | ಡಾ. ಪ್ರಕಾಶ ಗ. ಖಾಡೆ | ೩೦/– |
| ೪೧. | ಸುರಪುರ | ಶ್ರೀನಿವಾಸ ಜಾಲವಾದಿ | ೩೦/– |
| ೪೨. | ಕೆಂಭಾವಿ | ನಿಂಗನಗೌಡ ಹ. ದೇಸಾಯಿ | ೩೦/– |
| ೪೩. | ರಾಜನಕೋಳೂರು | ರಾಘವೇಂದ್ರ ಜಹಗೀರದಾರ | ೩೦/– |
| ೪೪. | ಭಾಲ್ಕಿ | ಡಾ. ರಘುಶಂಖ ಭಾತಂಬ್ರಾ | ೩೦/– |
| ೪೫. | ಗೋರಟಾ | ಷ.ಬ್ರ. ಡಾ. ರಾಜಶೇಖರ ಶಿವಾಚಾರ್ಯ ಸ್ವಾಮಿಗಳು | ೩೦/– |
| ೪೬. | ಕೇಂದ್ರ ಮೈದಾನ | ಡಾ. ವಸಂತಕುಮಾರ್ ಪೆರ್ಲ | ೩೦/– |
| ೪೭. | ರಾಮಶಾಲಾ ಬಯಲು | ರಾಮಣ್ಣ ಹವಳೆ | ೩೦/– |
| ೪೮. | ಉಳ್ಳಾಲ | ಡಾ. ಜ್ಯೋತಿ ಚೇಳ್ಯಾರು | ೩೦/– |
| ೪೯. | ಅಮರಸುಳ್ಯ | ಸಹನಾ ಕಾಂತಬೈಲು | ೩೦/– |
| ೫೦. | ಅಜ್ಜರಕಾಡು ಮೈದಾನ | ಡಾ. ಪೃಥ್ವೀರಾಜ ಕವತ್ತಾರು | ೩೦/– |
| ೫೧. | ಬಸರೂರು–ಕುಂದಾಪುರ | ಮಂಜುನಾಥ್ ಚಾಂದ್ | ೩೦/– |
| ೫೨. | ಪೊನ್ನಂಪೇಟೆ | ಸೊಮೆಯಂಡ ಕೌಸಲ್ಯ ಸತೀಶ್ | ೩೦/– |

| | | | |
|---|---|---|---|
| ೫೩. | ಮಡಿಕೇರಿ | ಪ್ರೊ. ಕೆ.ಆರ್. ದೀಕ್ಷಿತ್ | ೩೦/– |
| ೫೪. | ಅಜ್ಜಂಪುರ | ಚಿ.ಸ. ಪ್ರಭುಲಿಂಗ ಶಾಸ್ತ್ರಿ | ೩೦/– |
| ೫೫. | ಚಿಕ್ಕಮಗಳೂರು | ಚಿ.ಸ. ಪ್ರಭುಲಿಂಗ ಶಾಸ್ತ್ರಿ | ೩೦/– |
| ೫೬. | ಕಲಬುರಗಿ | ಡಾ. ಶಂಭುಲಿಂಗವಾಣಿ | ೩೦/– |
| ೫೭. | ಮುಧೋಳ–ಸೇಡಂ | ಮುಡಬಿ ಗುಂಡೇರಾವ | ೩೦/– |
| ೫೮. | ಅಂಕೋಲಾ | ಶಾಂತಾರಾಮ ನಾಯಕ | ೩೦/– |
| ೫೯. | ಶಿರಸಿ | ಪದ್ಮಾಕರ ಮಡಗಾಂವಕರ | ೩೦/– |
| ೬೦. | ಕಾರವಾರ | ಡಾ. ಉದಯ ಶಂಕರ ಪುರಾಣಿಕ | ೩೦/– |
| ೬೧. | ಬಳ್ಳಾರಿ | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೨. | ಹೊಸಪೇಟೆ | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೩. | ಕೊಟ್ಟೂರು | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೪. | ಕೂಡ್ಲಿಗಿ | ಡಾ. ಕೆ. ಸತೀಶ | ೩೦/– |
| ೬೫. | ಕಿತ್ತೂರು | ಪ್ರಕಾಶ ಗಿರಿಮಲ್ಲನವರ | ೩೦/– |
| ೬೬. | ಹುದಲಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೭. | ಬೆಳಗಾವಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೮. | ಹುಲಕುಂದ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೯. | ಬೆಂಗೇರಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೭೦. | ಕೊಪ್ಪಳ | ಮಹೇಶ ಬಳ್ಳಾರಿ | ೩೦/– |



| | | | |
|---|---|---|---|
| ೭೧. | ಗಂಗಾವತಿ | ರಮೇಶ ಸಿ. ಬನ್ನಿಕೊಪ್ಪ | ೩೦/– |
| ೭೨. | ಅಳವಂಡಿ | ಡಾ. ಪ್ರಕಾಶ ಬಳ್ಳಾರಿ | ೩೦/– |
| ೭೩. | ತುಮಕೂರು | ಡಾ. ಬಿ. ನಂಜುಂಡಸ್ವಾಮಿ | ೩೦/– |
| ೭೪. | ಮಧುಗಿರಿ | ಡಾ. ಬಿ. ನಂಜುಂಡಸ್ವಾಮಿ | ೩೦/– |
| ೭೫. | ತಾವರೆಕೆರೆ | ಪ್ರೊ. ಕೆ. ಪುಟ್ಟರಂಗಪ್ಪ | ೩೦/– |

❖ ❖ ❖